೧೯೮೮ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ (ಮುಂ. ವ. ಚರ್ಚೆ)

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೆ, ಈ ಮಸೂದೆಯನ್ನು ಈಗಾಗಲೇ ಮಂಡಿಸಲಾಗಿದೆ. ಇದು ಚರ್ಚೆಯಾಗಿ ಒಪ್ಪಿಗೆ ನೀಡಬೇಕಾದ ಹಂತದಲ್ಲಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಫರ್ದರ್ ಡಿಸ್ಕಷನ್ ಅಂದರೆ, ಸದಸ್ಯರಂ ಚರ್ಚೆ ಮಾಡ ಬೇಕು. ಮಂತ್ರಿಗಳು ಚರ್ಚೆ ಮಾಡುವುದು ಅಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಾನಂ ಇದರ ಬಗ್ಗೆ ಈಗಾಗಲೇ ಎಕ್ಸ್‌ಪ್ಲೇನ್ ಮಾಡಿದ್ದೇನೆ. ಅವರು ಈಗ ಮಾತನಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ, ಇದೊಂದು ಸಣ್ಣ ತಿದ್ದುಪಡಿ ಎಂದೆ ಹೇಳುತ್ತಾರೆ. ಇದರ ಮುಖ್ಯ ಉದ್ದೇಶ ಏನೆಂದರೆ It is considered necessary to amend Sections 17 and 21 of the Karnataka State Universities Act 1976, to overcome the difficulties in the matter of Appointment of Deans of faculties, where there is no Professor in a Faculty or where University does not have a Department of Studies for any faculty or where no person in any Department of Studies is available to act as the Dean. ಅಂದರೆ ಡೀನ್ ಪೋಸ್ಟ್‌ಗೆ ಸೆಲೆಕ್ಟ್ ಮಾಡುವಾಗ, ಸ್ವಲ್ಪ ಡೀಗ್ರೇಡ್ ಮಾಡಿದಹಾಗೆ ಆಗುತ್ತದೆಂದು ನನಗೆ ಅನಿಸುತ್ತದೆ. When Professors are not available any teacher can be nominated as Dean according to this amendment ಡೀನ್ ಪೋಸ್ಟ್ ಅಂದರೆ ಗೌರವವಾದ ಪೋಸ್ಟ್, ಇದರಿ ಯೂನಿವರ್ಸಿಟಿಯ ಎಲ್ಲಾ ಚಟುವಟಿಕೆಗಳನ್ನು ಕಂಟ್ರೋಲ್ ಮಾಡತಕ್ಕ ಒಂದು ಜವಾಬ್ದಾರಿ ಸ್ಥಾನ. ಅಂತಹ ಸ್ಥಾನದಲ್ಲಿ ಯಾರು ಸೀನಿಯರ್ ಇರುತ್ತಾರೆ ಅಂತಹವರನ್ನು ಮೊದಲಂ ಇದ್ದಹಾಗೆ ಇಡುವುದು ಒಳ್ಳೆಯ ಸಂಪ್ರದಾಯ ನನ್ನ ವಾದ ಅದು, ಇದನ್ನು ಪುನರ್ ಪರಿಶೀಲನೆ ಮಾಡಬೇಕು. ತಿದ್ದುಪಡಿ ಚಿಕ್ಕದು ಎಂದು ಹೇಳಿ ತರಾತುರಿಯಲ್ಲಿ ತಿದ್ದುಪಡಿಯನ್ನು ತಂದು ಇದರ ಸ್ಟ್ಯಾಂಡರ್ಡ್ ಕಡಿಮೆ ಮಾಡುವುದು ಬೇಡ. ಈಗಿರುವ ತಿದ್ದುಪಡಿಯ ಪ್ರಕಾರ ಯಾರಂ ಬೇಕಾದರೂ ಡೀನ್ ಆಗಬಹುದು. ಯಾರು ಅನುಭವವಿರತಕ್ಕ ಪ್ರೊಫೆಸರ್ಸ್ ಇದ್ದಾರೆ ಅವರಿಗೆ ಇಂತಹ ಸ್ಥಾನಮಾನಗಳನ್ನು ಕೊಡಬೇಕು. ಈಗ ನನ್ನ ಅಭಿಪ್ರಾಯದಲ್ಲಿ ಈ ತಿದ್ದುಪಡಿಯನ್ನು ತರತಕ್ಕ ಅವಶ್ಯಕತೆಯಿಲ್ಲ, ಇದರಿಂದ ಇನ್ನೊಂದಂ ವಿಷಾಗುತ್ತದೆಂದರೆ ಇವರಿಗೆ ಯಾರಿಗೋ ಕೊಡಬೇಕೆನ್ನುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದಾರೆಂದು ಅನಿಸುತ್ತದೆ ಏಕೆಂದರೆ ಹೊಸದಾಗಿ ಯೂನಿವರ್ಸಿಟಿಗಳು ಆಗಿವೆ. ಗುಲ್ಬರ್ಗ ಯೂನಿವರ್ಸಿಟಿ, ಶಿವಮೊಗ್ಗ ಯೂನಿವರ್ಸಿಟಿಗಳಾಗಿವೆ. ಅಲ್ಲಿ ಕೆಲವು ಕಡೆ ಫಾಕಲ್ಟೀಸ್ ಇಲ್ಲ, ಆ ಕಾಲದಲ್ಲಿ ಸಾಮಾನ್ಯವಾಗಿ ಟೀಚರ್ಸ್ ಆಗಿರತಕ್ಕವರಿಗೆ ಈ ಪೋಸ್ಟ್ ಬರತಕ್ಕದ್ದು ಆಗುತ್ತದೆ. ಸ್ಟ್ಯಾಂಡರ್ಡ್ ಇರತಕ್ಕ ಪೋಸ್ಟ್‌ಗೆ ಗೌರವ ಕಡಿಮೆಯಾಗುತ್ತದೆ. ಇದು ಅಕಾಡಮಿಕ್ ದೃಷ್ಟಿಯಿಂದ ಸರಿಯಾಗುವುದಿಲ್ಲವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇವೆ. ದಯವಾಡಿ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡ ಬೇಕಂ. ಸದ್ಯಕ್ಕೆ ಇದರ ಅವಶ್ಯಕತೆಯಿಲ್ಲ. ಕೇವಲ ಹೊಸಬರಿಗೆ ಇವರಿಗೆ ಬೇಕಾದಪರಿಗೆ ಯೂನಿವರ್ಸಿಟಿಗಳಲ್ಲಿ ಡೀನ್ ಪೋಸ್ಟ್ ಕೊಡುವುದಕ್ಕೆ ಇದನ್ನು ಮಾಡಿದ್ದಾರೆಂದು ನಮಗೆ ಅನಿಸುತ್ತದೆ. ಆದ್ದರಿಂದ ದಯವಾಡಿ ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† **ಶ್ರೀ ಎಂ. ವೀರಪ್ಪ ಮೊಯಿಲಿ** (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೇ, ಈಗ ಈ ವಿಚಾರವನ್ನು ಪ್ರಸ್ತಾಪ ಮಾಡುವ ಮೊದಲಂ ಇಂತಹ ಮಸೂದೆ ಯಾವುದು ಒಂದು ವಿಶ್ವವಿದ್ಯಾನಿಲಯಕ್ಕೆ ಅಥವಾ ಒಂದು ವಿದ್ಯಾಕ್ಷೇತ್ರದಲ್ಲಿ ಬರುವಾಗ ಆಯಾಯ ಕ್ಷೇತ್ರದ ಏನು ಅಕಾಡೆಮಿಶಿಯನ್ಸ್ ಇದ್ದಾರೆ, ಅವರಿಂದ ಸಲಹೆಗಳು ಒಡಮೂಡಿಕೊಂಡು ಬರಬೇಕು. ಏಕೆಂದರೆ ಅದು ಬರೇ ಅಧಿಕಾರಿಗಳಿಂದ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತಪ್ಪಿಹೋಗಿ ಡೈರೆಕ್ಟರೇಟ್‌ನಿಂದ ಕೆಲವು ಸಾರಿ ಪ್ರಪೋಸಲ್ಸ್ ಬಂದರೆ ಬಹಳ ಕಷ್ಟವಾಗುತ್ತದೆ ಎಂಬುದನ್ನು ಬಹುಶಃ ಈ ಮಸೂದೆಯನ್ನು ನೋಡಿ ಕಲಿಯಬೇಕು. ಏಕೆಂದರೆ ನನಗೆ ಗೊತ್ತಾದ ಮಟ್ಟಿಗೆ ತಿದ್ದುಪಡಿಯ ಮೊದಲು ಇರುವುದನ್ನು ನೋಡಿ. ಯೂನಿವರ್ಸಿಟಿಗಳಲ್ಲಿ ಅಥವಾ ಕಾಲೇಜುಗಳಲ್ಲಿ ಈ 'ಟೀಚರ್ಸ್' ಪೋಸ್ಟ್ ಇದೆಯಾ ? There is a post called Lecturer... ನಾವೂ ಕಾಲೇಜ್ ಎಜುಕೇಶನ್ ಮಾಡಿದ್ದೇವೆ. There is no post designated as te cher. There is a post like Lecturer, Reader... There is no such post as Teacher. Therefore, ಅದನ್ನಾದರೂ ಕೊನೆಪಕ್ಷ ಮಾನ್ಯ ಸಚಿವರು ತಿದ್ದುಪಡಿ ಮಾಡುತ್ತಾರೆಂದು ಹೇಳುತ್ತೇನೆ. ಇಲ್ಲಿ ಏನಿದೆ ಎಂದರೆ,

> "Provided that if in any Faculty there is no Professor, the Senior-most Reader shall act as the Dean and if there is no Reader, such teacher as the Vice-Chancellor may designate shall act as the Dean.

When there is no such person designated how can you make him to hold such post i.e., as Dean. Instead of teacher it should be 'Lecturer'. When there is no post of Teacher how can you designate him as the Dean. It is a gross defect in the bill itself. ಇದನ್ನು 'ಲೆಕ್ಚರರ್ಸ್' ಮಾಡಬೇಕು ಎನ್ನುವುದು ಒಂದು. ಏಕೆಂದರೆ ಇದು ಯೂನಿವರ್ಸಿಟಿ ಮಟ್ಟದಿಂದ ಬಂದಿಲ್ಲ. ಎಲ್ಲೋ ಇಲ್ಲಿ ಅಧಿಕಾರಿಗಳ ಮಟ್ಟದಲ್ಲಿ ಏನು ಆಗಬೇಕೆಂದು ಮಾಡುತ್ತಾರೆ ಅಥವಾ ....

ಶ್ರೀ ಎಂ. ಚಂದ್ರಶೇಖರ್.—ಅದನ್ನು ನಾನು ಹೇಳುತ್ತೇನೆ.

ಶ್ರೀ ಎಂ ವೀರಪ್ಪ ಮೊಯಿಲಿ.—ಅದನ್ನು ಹೇಳಿ. ಮತ್ತೊಂದು ಏನಾಗಿದೆ ಎಂದರೆ ಹಿಂದೆ ಏನಾಗಿದೆ ಸಮರ್ಥವಾಗುತ್ತಾ ಇಲ್ಲ. ಹಿಂದೆ ಯಾವ ತೊಂದರೆ ಆಯಿತು ಎಂದು ತಾವು ಬೇಳಬೇಕು. ಈಗಾಗಲೇ ಸಾಕಷ್ಟು ಜನರ ಅಭಿಪ್ರಾಯ ಏನು ಎಂದರೆ ಅಕಾಡೆಮಿಕ್ ಸ್ಟ್ಯಾಂಡರ್ಡ್ ಯೂನಿವರ್ಸಿಟಿಗಳಲ್ಲಿ ಕಡಿಮೆಯಾಗುತ್ತಿದೆ ಎನ್ನುವುದು. ಇದನ್ನು ಹೈಯರ್ ಲೆವಲ್‌ಗೆ ತರಬೇಕು. ಡೀನ್ ಅಂತ ಹೇಳಿದರೆ ಆ ಫೀಲ್ಡ್‌ನಲ್ಲಿ ಮುಖ್ಯವಾದ ಅಕ್ಯಾಡೆಮಿಕ್ ಪೋಸ್ಟ್. ಆ ಸಬ್ಜೆಕ್ಟ್‌ನಲ್ಲಿ ಅತನೇ ವೈಸ್ ಛಾನ್ಸಲರ್. ಆಮೇಲೆ ಈಗ ಒಂದೊಂದು ರಾಜ್ಯಕ್ಕೆ ಒಂದೇ ಯೂನಿವರ್ಸಿಟಿ ಅಲ್ಲ, ಎರಡು-ಮೂರು ಜಿಲ್ಲೆಗಳಲ್ಲಿ ಒಂದು ಯೂನಿವರ್ಸಿಟಿ ಈಗ ಆಗಿಬಿಟ್ಟಿದೆ. I would have rather appreciated, you could have even now introduce an amendment instead of this you make a person of another University as Dean in case there is no qualified person available in that University. Supposing if there is no person available to be designated as Dean in Bangalore University you can designate person with required qualification of other University to be the Dean of that such University. ಇಂತಹ ಅಮೆಂಡಮೆಂಟ್ ಮಾಡುವುದಕ್ಕೆ ಸಾಧ್ಯ ಇದೆ. ಏಕೆಂದರೆ ನಮ್ಮ ಕಾಮನ್ ಯೂನಿವರ್ಸಿಟಿ ಆಕ್ಟ್ ಇದ್ದುದರಿಂದ ಈ ತೊಂದರೆಗಳು ಬರುವುದಕ್ಕೆ ಸಾಧ್ಯ ಇಲ್ಲ. If you can empower Chancellor or Vice-Chancellor to nominate a person as Dean of that subject of neighbouring University... ಬಹುಶಃ ನೀವು ಇದನ್ನು ಡಿಲೀಟ್ ಮಾಡುವಂಥ ಅವಶ್ಯಕತೆ ಇಲ್ಲ ಅದಕ್ಕೇ ಈ ಬಿಲ್ ಮೊನ್ನೆ ಬಂದಾಗ ಇನ್ನೂ ವಿಚಾರಮಾಡಿ ಎಂದು ತಮಗೆ ಹೇಳಿದ್ದು ನೆನಪಿರಬಹುದು. ವಿದ್ಯಾಭ್ಯಾಸದ ಮಟ್ಟವನ್ನು ಇನ್ನೂ ಕೆಳಕ್ಕೆ ತರತಕ್ಕಂಥ ಪ್ರಯತ್ನ ಮಾಡಬೇಡಿ Anybody cannot be asked to hold any post. ಅದಕ್ಕೆ ರಿಕ್ವಿಸಿಟ್ ಕ್ವಾಲಿಫಿಕೇಶನ್ ಬೇಕು. ಏಕೆಂದರೆ ಇದೊಂದು ಕ್ಲೆರಿಕಲ್ ಜಾಬ್ ಅಲ್ಲ ಪರ್ಟಿಕ್ಯೂಲರ್ ಸ್ಟ್ಯಾಂಡರ್ಡ್ ಮೇಂಟೇನ್ ಮಾಡಬೇಕಾಗುತ್ತದೆ. ಈ ಪ್ರಾವಿಜನ್ ಅನ್ನು ಇಂಟ್ರೊಡ್ಯೂಸ್ ಮಾಡಿ ಪ್ರೊಫೆಸರ್ ಇಲ್ಲದಿದ್ದರೆ ರೀಡರ್, ರೀಡರ್ ಇಲ್ಲದಿದ್ದರೆ ಟೀಚರ್, ಟೀಚರ್ ಇಲ್ಲದಿದ್ದರೆ ಟ್ಯೂಟರ್,

ಟ್ಯೂಟರ್ ಇಲ್ಲದಿದ್ದರೆ ಒಬ್ಬ ಎಫ್.ಡಿ.ಸಿ., ಆತ ಇಲ್ಲದಿದ್ದರೆ ಒಬ್ಬ ಪೀವನ್‌ನನ್ನು ಮಾಡಿ ಎಂದರೆ ಹೇಗೆ ?

ಎಲ್ಲಿಯವರೆಗೆ ನಾವು ಕೆಳಗೆ ಇಳಿಯುತ್ತಿದ್ದೇವೆ ಎಂಬುದನ್ನು ತಾವು ದಯವಿಟ್ಟು ಆಲೋಚನೆ ಮಾಡಬೇಕಾಗುತ್ತದೆ. ಇದರ ಅವಶ್ಯಕತೆ ಏನಿತ್ತು, ಇದರ ಬಗ್ಗೆ ಏಕೆ ಆಲೋಚನೆ ಮಾಡಬಾರದಿತ್ತು, There is some sanctity attached to this post..... ಈ ತರಹ ಡೀಗ್ರೇಡ್ ಡೀವ್ಯಾಲ್ಯೂ ಮಾಡತಕ್ಕ ವ್ಯವಸ್ಥೆ ಏಕೆ ? ಇದಕ್ಕೆ ಸೈದ್ಧಾಂತಿಕ ಹಿನ್ನೆಲೆ ಇದೆ. ಪ್ರತಿಯೊಂದು ಪೋಸ್ಟ್‌ನ್ನೂ ಡೆಮಲಿಷ್ ಮಾಡತಕ್ಕ ಪರಿಸ್ಥಿತಿಗೆ ಹೋದರೆ, ಇದನ್ನು ಮತ್ತೆ ಹಿಂದಕ್ಕೆ ತೆಗೆದು ಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಯಾವುದೇ ಒಂದು ಪೋಸ್ಟನ್ನು ಲಿಬರ್‌ಲೈಸ್ ಮಾಡುತ್ತಾ ಹೋದರೆ, ಅದು ಲಿಬರ್‌ಲೈಸ್ ಆಗುತ್ತಲೇ ಹೋಗುತ್ತದೆ. ಇದನ್ನು ಪೊರಾನ್ಸಿಂದ ಎತ್ತುವುದಕ್ಕೆ ಯಾರಿಗೂ ಸಾಧ್ಯವಾಗುವುದಿಲ್ಲ. ವೈಸ್‌ಚಾನ್ಸಲರಿಗೆ ಅಧಿಕಾರ ಕೊಡುವುದನ್ನು ಮಾಡುತ್ತಿದ್ದೀರಿ, ಏಕೆ ಮಾಡಬೇಕು ? That particular post should not be under the mercy of anyone. That should have statutory recoginition. Statutory sanctity which has given to that particular post..... ಇದು ಸರ್ವಥಾ ಸರಿಯಲ್ಲ ಎನ್ನುವುದನ್ನು ಹೇಳುತ್ತಿದ್ದೇನೆ. ಈ ಅಮೆಂಡ್‌ಮೆಂಟ್‌ಅನ್ನು ನಾನು ಖಂಡಿತವಾಗಿಯೂ ವಿರೋಧ ಮಾಡುತ್ತೇನೆ, ಇನ್ನು ಸೆಕ್ಷನ್ ೨೧ಕ್ಕೆ ಒಂದು ಅಮೆಂಡ್‌ಮೆಂಟ್ ಮಾಡುತ್ತಿದ್ದೀರಿ. ಇದು. ಹಿಂದೆ ಇರುವುದು ಎಲ್ಲಾ ಸರಿಯಾಗಿದೆ. One Professor or Director in the Post-graduate Departments from each of the faculties, elected by Professors and Directors in Post-Graduate Department of that faculty.....ಇದನ್ನು ಏಕೆ ಬದಲಾವಣೆ ಮಾಡಬೇಕು. ವೈಸ್ ಚಾನ್ಸಲರಿಗೆ ವಿಶೇಷವಾದ ಅಧಿಕಾರವನ್ನು ಕೊಡತಕ್ಕ ಪಂತ್ತು ಅವರಿಗೆ ರೆಕ್‌ಮೆಂಡ್ ಮಾಡತಕ್ಕ ಕೆಲಸ ಚಾನ್ಸಲರ್ ಮಾಡಬೇಕೆಂಬ ಡಿಸ್ಕ್ರಿಪನ್ ಕೊಟ್ಟಿದ್ದೀರಿ. ಇದು ಸರ್ವಥಾಸರಿಯಲ್ಲ. The concept of mobility between one University and another one unversity wherever a particular standard or requisite qualified person who hold that Dean post is not available and if there are more than one Professor the Vice-Chancellor has to choose one of them. You want a Professor for a period of one year. Why don't you do one thing. You need not have representation at all. There is no need to represent as far as that body or class of Professors are concerned. It is a question of representation to that particular senate.....ನೀವು ಹೇಳಬಹುದು, ಇಬ್ಬರು ಪ್ರೊಫೆಸರ್ಸ್, ಇದ್ದರೆ ಚುನಾವಣೆ ಮಾಡುವುದಕ್ಕಾಗುವುದಿಲ್ಲ ಎಂದು. It is a question of representation to that particular senate. If there is less than two... ಎಂದು ಇಲ್ಲಿ ಹಾಕಿದ್ದೀರಿ. ಒಬ್ಬರು ಇದ್ದರೆ ಅಥವಾ ಇಬ್ಬರು ಇದ್ದರೆ ಯಾರನ್ನು ಯಾರು ರೆಪ್ರೆಸೆಂಟ್ ಮಾಡುವುದು ? ನಾವು ರೆಪ್ರೆಸೆಂಟ್ ಕೊಡಬೇಕಾಗಿಲ್ಲ. That could be looked after by other Members of the Senate..... ಇಬ್ಬರು ಇದ್ದರೂ ರೆಪ್ರೆಸೆಂಟ್ ಕೊಡಬೇಕು, ಒಬ್ಬರು ಇದ್ದರೂ ರೆಪ್ರೆಸೆಂಟ್ ಕೊಡಬೇಕು ಎಂದು ಹೇಳಿ, ನೀವು ಹೊರಟಿರುವ ದಾಟಿ ಏನಿದೆ, ಯೂನಿವರ್ಸಿಟಿ ಸ್ಟ್ಯಾಂಡರ್ಡ್ ಎತ್ತಬೇಕೆಂಬ ಕಳಕಳಿ ಏನಿದೆ, ಸಂಪೂರ್ಣವಾಗಿ ಇದು ಸರ್ಕಾರದ ದೃಷ್ಟಿಯಲ್ಲಿ ಶೂನ್ಯವಾಗಿದೆ ಎಂಬುದನ್ನು ಈ ತಿದ್ದುಪಡಿ ಎತ್ತಿ ತೋರಿಸಿದೆ. ಇದನ್ನು ಪ್ರೆಸ್ ಮಾಡದೇ ಪುನಃ ಆಲೋಚನೆ ಮಾಡಿ ಒಂದು ಹೊಸದಾದ ಪ್ರೊಗ್ರೆಸ್ಸಿವ್ ಥಿಂಕಿಂಗ್ ತನ್ನಿ. ಮತ್ತು ಯೂನಿವರ್ಸಿಟಿ ಸ್ಟ್ಯಾಂಡರ್ಡ್‌ನ್ನು ಎತ್ತರಕ್ಕೆ ಏರಿಸತಕ್ಕಂಥ ದೃಷ್ಟಿಯಲ್ಲಿ ತಿದ್ದುಪಡಿ ತನ್ನಿ, ತಾವು ಹಿರಿಯರು, ಅನುಭವಿಗಳೂ ಇದ್ದೀರಿ. ಇದನ್ನು ಅಷ್ಟು ಸರಳವಾಗಿ ನೋಡದೇ, ಹೆಚ್ಚು ಗಂಭೀರತೆಯಿಂದ ಪರಿಶೀಲನೆ ಮಾಡಬೇಕೆಂದು ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸ್ಟೇಟ್ ಯೂನಿವರ್ಸಿಟೀಸ್ ಅಮೆಂಡ್‌ಮೆಂಟ್ ಬಿಲ್ ೧೯೮೫, ಈ ತಿದ್ದುಪಡಿಯ ಸ್ವರೂಪ ಬಹಳ ಸುಲಭವಾದುದು,

ಇದರ ಬಗ್ಗೆ ಚರ್ಚೆಯೇ ಬೇಡ, ಹಾಗೇ ಬಿಲ್ ಪಾಸ್ ಮಾಡಬಹುದೆಂದು ಕಂಡರೂ ಕೂಡಾ, ಈ ಮಸೂದೆಯ ಉದ್ದೇಶವನ್ನು ಈ ಮಸೂದೆಯ ಒಳಗೆ ಅವರು ಕೊಟ್ಟಿರತಕ್ಕಂಥ ಶಬ್ದಗಳ ಜೋಡಣೆಯನ್ನು ಗಮನಿಸಿ ನೋಡಿದಾಗ, ಇದರ ಉದ್ದೇಶ ಏನು ಎಂಬುದನ್ನು ನೋಡಬಹುದು. ಈಗಾಗಲೇ ಮಾನ್ಯ ಖರ್ಗೆಯವರು ಪಾಯಿಂಟ್ ಔಟ್ ಮಾಡಿದಹಾಗೆ, ಸೆಕ್ಷನ್ ೧೭ರ ಅಮೆಂಡ್‌ಮೆಂಟ್‌ನಲ್ಲಿ ಸೆಕೆಂಡ್ ಪ್ಯಾರಾಗ್ರಾಫ್‌ನಲ್ಲಿ ಇವರು ಏನು ಹೇಳುತ್ತಾರೆ ಎಂದರೆ 'Provided that if in any Faculty there is no Professor, the Senior-most Reader shall act the Dean and if there is no Reader, such teacher as the Vice-chancellor may designate shall act as the Dean:

ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ. ಈಗ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಜಾತೀಯತೆ ಎನ್ನುವುದು ತಾಂಡವಾಡುತ್ತಿದೆ. ಯಾವುದೇ ಯೂನಿವರ್ಸಿಟಿಗೆ ಹೋದರೂ ಕೂಡಾ ಒಂದೊಂದು ಯೂನಿವರ್ಸಿಟಿಯಲ್ಲಿ ಒಂದೊಂದು ಜಾತಿಯವರು ಗುಂಪುಗಳನ್ನು ಕಟ್ಟಿಕೊಂಡಿದ್ದಾರೆ. ಇದು ರೀಜನ್ ವೈಸ್ ಇದೆ ಇದು ಎಲ್ಲರಿಗೂ ಗೊತ್ತಿದೆ ಹೊಸದೇನೂ ಅಲ್ಲ. ಸೆಕ್ಷನ್ ೧೭ರ ಅಮೆಂಡ್ ಮೆಂಟ್‌ನಲ್ಲಿ ತಾವು ಕೊಟ್ಟಿರುವ ಪ್ರಾವಿಜನ್ ಪ್ರಕಾರ 'such teacher as the Vice-Chancellor may designate shall act as the Dean'.....ಎಂದು ಹೇಳಿದರೆ, ವೈಸ್‌ಚಾನ್ಸಲರ್ ಯಾವ ಜಾತಿಗೆ ಸೇರಿರುತ್ತಾರೋ, ಆ ಜಾತಿಗೆ ಸೇರಿರತಕ್ಕಂಥ ಟೀಚರ್ ಅಥವಾ ಲೆಕ್ಚರರನ್ನು ಅವರಿಗೆ ಸೀನಿಯಾರಿಟಿ ಇರಲಿ ಬಿಡಲಿ ಅವರನ್ನು ಡೀನ್ ಎಂದು ಅಪಾಯಿಂಟ್ ಮಾಡುವುದಕ್ಕೆ there is very clear opportunity for Vice-Chancellor of the University.....ಇದು ಈ ತರಹ ಬಹಳ ಅಪಾಯಕಾರಿ ಮಸೂದೆ ಎಂದು ನಾನು ಅಂದುಕೊಂಡಿದ್ದೇನೆ. ಇದಕ್ಕೆ ಕಾರಣ ಏನೆಂದು ಹೇಳಿದರೆ, ಉದಾಹರಣೆಗೆ ನಾವು ನಮ್ಮ ಹಾ. ಮಾ. ನಾಯಕ್‌ರವರನ್ನು ತೆಗೆದುಕೊಳ್ಳಬಹುದು. ಅವರನ್ನು ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಉಪಕುಲಪತಿಗಳನ್ನಾಗಿ ನಾಮಿನೇಟ್ ಮಾಡಿದರಂ. ಅವರು ಬಂದಾಗ ನಾವು ಬಹಳ ಸಂತೋಷ ಪಟ್ಟೆವು. ಒಳ್ಳೆಯ ವ್ಯಕ್ತಿಯನ್ನು ಗುಲಬರ್ಗಾ ವಿಶ್ವವಿದ್ಯಾನಿಲಯಕ್ಕೆ ಉಪಕುಲಪತಿಯನ್ನಾಗಿ ಮಾಡಿರುತ್ತಾರೆ, ಆ ಯೂನಿವರ್ಸಿಟಿಯ ಪ್ರಗತಿ ಆಗಬಹುದು ಎಂದುಕೊಂಡೆವು ಕಾರಣ ನಾನೂ ಆ ಯೂನಿವರ್ಸಿಯ ಗ್ರಾಜುಯೇಟ್ ಆಗಿರುತ್ತೇನೆ. ಆದರೆ ಆಗಿದ್ದು ಏನು ಎಂದರೆ ಕೆಲವು ಕಾಲೇಜಿಗೆ ಯಾವುದೇ ಇನ್‌ಫ್ರಾಸ್ಟ್ರಕ್ಚರ್ ಇಲ್ಲ ವೋ ಅಲ್ಲಿಗೆ ೨೨ ರಿಂದ ೪೦ ಹೆಚ್ಚು ಸೀಟ್ ಅಡ್ಮಿಷನ್ ಮಾಡುತ್ತಿದ್ದಾರೆ, ಇವರಿಗೆ ರೆಕಗ್ನಿಷನ್ ಕೊಡಬಾರದು ಎಂದರೆ ವಿಶ್ವವಿದ್ಯಾನಿಲಯದವರಂ ರಿಜೆಕ್ಟ್ ಮಾಡಿದರೆ, ಅಂತಹ ಕಾಲೇಜುಗಳಿಗೆ ೨೪ ಗಂಟೆಗಳಲ್ಲಿ ಸರಕಾರ ಮಾನ್ಯತೆ ಕೊಟ್ಟಿರತಕ್ಕಂಥಾದ್ದು ನಮ್ಮ ನಾಯಕ್‌ರವರ ಕಾಲದಲ್ಲಿ ನಡೆದಿದೆ. ಗುಲಬರ್ಗಾ ಯೂನಿವರ್ಸಿಟಿಯಲ್ಲಿ ಮಾತ್ರವೆಲ್ಲ ಎಲ್ಲಾ ಕಡೆ ನಡೆದಿದೆ. ಅವರು ಉಪಕುಲಪತಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಆಮೇಲೆ, ಒಂದು ಕಾರ್ಯಕ್ರಮ ಏರ್ಪಡಿಸಿದರು. ಅದೇನೂ ಸೆಂಡ್ ಆಫ್ ಎಂದು ಅಲ್ಲ. ಸನ್ಮಾನ ಅಲ್ಲ, ಕೇವಲ ಒಂದು ರೀತಿಯ ಗೆಟ್ ಟುಗೆದರ್ ಎಂದು ಹೇಳಬಹುದು. ಅದಕ್ಕೆ ಆಗ ಪಿ. ಡಬ್ಲ್ಯು.ಡಿ. ಮಂತ್ರಿಗಳಾಗಿದ್ದ ಮಾನ್ಯ ದೇವೇಗೌಡರು ಬಂದಿದ್ದರು ಆ ಸಭೆಗೆ ನಾನೂ ಹೋಗಿದ್ದೆ. ಆದರಲ್ಲಿ ಹಾ. ಮಾ. ನಾಯಕ್‌ರವರು ಬಹಳ ಮಾನನೊಂದುಕೊಂಡು ವೈಸ್‌ಚಾನ್ಸಲರ್ ಹುದ್ದೆಯ ಬಗ್ಗೆ ಮಾತನಾಡಿದರು. ಆ ಹುದ್ದೆಯ ಬಗ್ಗೆ ಮಾತನಾಡುತ್ತಾ ಅವರು ತಮಾಷೆಗೆ ಒಂದು ಕಥೆ ಹೇಳಿದರಂ. ಕಲ್ಕತ್ತಾದಲ್ಲಿ ಹೋಗಿ ಯಾವುದಾದರೂ ರಿಕ್ಷಾದವನನ್ನು ಕರೆದು, ರೈಲ್ವೆಸ್ಟೇಷನ್‌ಗೆ ಬಾ ಎಂದರೆ ಬರುತ್ತಾನೆ ಬಸ್‌ಸ್ಟ್ಯಾಂಡ್‌ಗೆ ಬಾ ಎಂದರೆ ಬರುತ್ತಾನೆ, ಆದರೆ ಯೂನಿವರ್ಸಿಟಿಗೆ ಬರುತ್ತೀಯಾ ಎಂದರೆ ಬರುವುದಿಲ್ಲ ಏನ್ನುತ್ತಾನೆ, ಏಕ್ಕೆಂದರೆ ಅಲ್ಲಿಗೆ ಹೋದಕೂಡಲೇ ನನ್ನನ್ನು ಹಿಡಿದುಕೊಂಡು ವೈಸ್‌ಚಾನ್ಸಲರ್ ಮಾಡಿಬಿಡುತ್ತಾರೆ, ಅದಕ್ಕೆ ನಾನು ಅಲ್ಲಿಗೆ ಬರುವುದಿಲ್ಲ ಎನ್ನುತ್ತಾನೆ ಎಂದರು. ಈ ಮಟ್ಟದ ಒಂದು ಪ್ರಜ್ಞೆ ಒಂದು ಕಲ್ಪನೆ ಇದೆ. ಉಪಕುಲಪತಿಯ ಸ್ಥಾನಮಾನ ಅಲ್ಲಿಗೆ ಬಂದಿದೆ. ಈ ಮಾತನ್ನು ಅವರು ಬಹಳ ನೊಂದುಕೊಂಡು ಹೇಳಿದರು. ಇಷ್ಟಾದಮೇಲೆ ಮಾನ್ಯ ಸಚಿವರು ಓಪನ್ ವೋಟಿಂಗ್‌ನಲ್ಲಿ ಅವರಿಗೆ ಅಪೀಲ್ ಮಾಡಿದರು. ಇನ್ನೊಮ್ಮೆ ಉಪಕುಲಪತಿ ಸ್ಥಾನ ಸಿಕ್ಕಿದರೆ ಒಪ್ಪಿಕೊಳ್ಳಬೇಕೆಂದು ಅವರು ಹೇಳಿದರಂ. ಅದಕ್ಕೆ ಹಾ. ಮಾ. ನಾಯಕ್‌ರವರು ಏನಂ ಹೇಳಿದರಂ ಎಂದರೆ, ಯಾರಾದರೂ ನಿಮಗೆ ನಿಜವಾದ ವೈರಿ ಎಂದೇ ಇದ್ದರೆ, ಅವರಿಗೆ ವೈಸ್‌ಚಾನ್ಸಲರ್ ಆಗುವುದಕ್ಕೆ ಸಜೆಸ್ಟ್ ಮಾಡಿ ಎಂದು ಹೇಳಿದರು. ಇದರಿಂದ ವೈಸ್‌ಚಾನ್ಸಲರ್ ಹುದ್ದೆ ಈ ದೇಶದಲ್ಲಿ ಈ ರಾಜ್ಯದಲ್ಲಿ ಎಲ್ಲಿಗೆ ಬಂದಿದೆ ಎಂಬುದನ್ನು ನೋಡಬಹುದು. ಇನ್ನು ಅಧ್ಯಕ್ಷರೇ, ಯೂನಿವರ್ಸಿಟಿ

ಗಳು ಜಾತೀಯ ಕೇಂದ್ರಗಳಾಗಿವ್ದಾವೆ ಎಂದು ನಾನು ಮೊದಲೇ ಹೇಳಿದೆ. ಒಂದು ಯೂನಿವರ್ಸಿಟಿ ಲಿಂಗಾಯತರದ್ದು ಒಂದು ಯೂನಿವರ್ಸಿಟಿ ಒಕ್ಕಲಿಗರದ್ದು, ಒಂದು ಪುರೋಹಿತರದ್ದು ಒಂದು ಕ್ರಿಶ್ಚಿಯನ್ನರದ್ದು, ನಮ್ಮ ದೇಶದಲ್ಲಿರತಕ್ಕಂಥ ಯೂನಿವರ್ಸಿಟಿಗಳನ್ನು ಒಮ್ಮೆ ಜ್ಞಾಪಿಸಿಕೊಂಡರೆ ಸಾಕು ಈ ಒಂದು ಚಿತ್ರ ನಮ್ಮ ಕಣ್ಮುಂದೆ ಬರುತ್ತದೆ. ಯಾವ ಯಾವ ಯೂನಿವರ್ಸಿಟಿಯಲ್ಲಿ ಏನೇನು ನಡೆಯುತಿದೆ ಎಂಬುದು ಗೊತ್ತಾಗುತ್ತದೆ, ಇಂತಹ ಒಂದು ವ್ಯವಸ್ಥೆಯಲ್ಲಿರತಕ್ಕಂಥ ನಾವು ಇವತ್ತು ತಂದಿರತಕ್ಕಂಥ ಈ ಮಸೂದೆಯ ಸೆಕ್ಷನ್ ೧೭ರಲ್ಲಿರತಕ್ಕಂಥ ಪ್ರಾವಿಜನ್ ನೋಡಿದರೆ. ವೈಸ್ ಚಾನ್ಸಲರ್, ತಪ್ಪಿಗೆ ಇಷ್ಟಬಂದ ವ್ಯಕ್ತಿಯನ್ನು ಸೀನಿಯಾರಿಟಿ ಇರಲಿ, ಬಿಡಲಿ, ಡೀನ್ ಎಂದು ನೇಮಕ ಮಾಡತಕ್ಕ ಅಧಿಕಾರವನ್ನು ಸಂಪೂರ್ಣವಾಗಿ ಅವರಿಗೆ ಕೊಡತಕ್ಕಂಥ ಅರ್ಥ ಇದರಲ್ಲಿ ಇದೆ. ಆದಕಾರಣ ಇದನ್ನು ಮಾಡುವುದರ ಬದಲು ಸಬ್ ಟೀಚರ್ ಎನ್ನುವ ಬದಲು ಸೀನಿಯರ್ ಮೋಸ್ಟ್ ಟೀಚರ್ ಎಂದು ಹೇಳಿದ್ದರೆ ಅರ್ಥ ಇತ್ತು. ಸೀನಿಯರ್ ಮೋಸ್ಟ್ ಟೀಚರ್ ಎಂದು ಅಮೆಂಡ್‌ಮೆಂಟ್‌ನಲ್ಲಿ ಇದ್ದರೆ ಯಾವುದೇ ರಾಜಕೀಯ ಮಾಡುವುದಕ್ಕೆ. ಜಾತಿಯತೆಯ ಪ್ರಭಾವ ಬೀರುವುದಕ್ಕೆ ಅವಕಾಶ ಇರುತ್ತಿರಲಿಲ್ಲ. ಆ ರೀತಿಯಲ್ಲಿ ಅನುಕೂಲವಾಗುತ್ತಿತ್ತು ಎಂಬ ಮಾತನ್ನು ಹೇಳಿ ಇಂತಹ ಚಿಕ್ಕಪುಟ್ಟ ತಪ್ಪುಗಳನ್ನು, ಸಣ್ಣಪುಟ್ಟ ಅಮೆಂಡ್‌ಮೆಂಟ್‌ಗಳನ್ನು ಸರಕಾರ ಮಾಡಕೂಡದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

೩–೩೦ ಪಿ. ಎಂ.

ಮಾನ್ಯ ಅಧ್ಯಕ್ಷರೇ, ಕಳೆದ ೧೯೫೭ನೇ ಇಸವಿಯಲ್ಲಿ ನಾವು ಯಾನಿವರ್ಸಿಟಿಗಳಿಗೆ ಸಂಬಂಧಪಟ್ಟ ಒಂದು ಮಸೂದೆಯನ್ನು ಪಾಸ್ ಮಾಡಿ ಕೊಟ್ಟಿದ್ದೇವೆ. ಆಗ ಸನ್ಮಾನ್ಯ ಜೀವರಾಜ ಆಳ್ವರವರು ಮಂತ್ರಿಗಳಾಗಿದ್ದರು. ಯೂನಿವರ್ಸಿಟಿಗಳಲ್ಲಿ ಕೆಲಸ ಮಾಡತಕ್ಕಂಥ ಹಂಗಾಮಿ ನೌಕರರನ್ನು ಖಾಯಂ ಮಾಡುತ್ತೇವೆಂಬ ಮಸೂದೆಯ ಬಗ್ಗೆ ಎಕ್ಸ್‌ಪ್ಲೇನ್ ಮಾಡುತ್ತಾ ಇದು ಬಹಳ ಸಿಂಪಲ್ ಮಸೂದೆ, ಹಂಗಾಮಿ ಲೆಕ್ಚರರ್ಸ್‌ನ್ನು ಮತ್ತು ಉಪನ್ಯಾಸಕರನ್ನು ನಾವು ಖಾಯಂ ಮಾಡುವುದಕ್ಕೆ ತಂದಿರತಕ್ಕಂಥ ಮಸೂದೆ ಪಾಸ್ ಮಾಡಿ ಕೊಡಿ ಎಂದಾಗ ವಿರೋಧಪಕ್ಷದವರೆಲ್ಲರೂ ಕೂಡ ಚರ್ಚೆ ಆಗಬೇಕೆಂದು ಒತ್ತಾಯ ಮಾಡದೆ ಪಾಸ್ ಮಾಡಿ ಕೊಟ್ಟಿದ್ದೇವೆ. ಆ ಬಿಲ್‌ನಲ್ಲಿ ಒಂದು ಡೇಟ್ ನಿಗದಿ ಮಾಡಿದರು. ತಪ್ಪುಗಳು ಹೇಗೆ ಆಗುತ್ತವೆನ್ನುವುದನ್ನು ತಾವು ಸ್ವಲ್ಪ ನೋಡಿ. ಡೇಟ್ ನಿಗದಿ ಮಾಡುವಾಗ ಏನಂತ ಮಾಡಿದರೆಂದರೆ ದಿನಾಂಕ ೧೫–೮–೫೪ ರಲ್ಲಿ ನೇಮಕವಾಗಿದ್ದು ದಿನಾಂಕ ೧೫–೮–೫೬ ರವರೆವಿಗೂ ಸೇವೆಯಲ್ಲಿ ಇದ್ದವರನ್ನು ಖಾಯಂಗೊಳಿಸಬೇಕು ಎಂದು. ಆದರೆ ತಾವು ಕಬ್ಬನ್ ಪಾರ್ಕ್‌ಗೆ ಹೋಗಿ ಅವರ ಪರಿಸ್ಥಿತಿಯನ್ನು ನೋಡಬೇಕಿತ್ತು. ಅಲ್ಲಿಗೆ ಬಂದಿದ್ದವರು ಯಾರ್ಯಾರು ಗೊತ್ತೇ, ಅವರವರ ಸಬ್ಜೆಕ್ಟ್‌ಗಳಲ್ಲಿ ರೀಸರ್ಚ್ ಮಾಡಿರತಕ್ಕಂಥವರು, ಡಾಕ್ಟರೇಟ್ / ಪಡೆದುಕೊಂಡಿರತಕ್ಕಂಥವರು ಯೂನಿವರ್ಸಿಟಿಗಳಲ್ಲಿ ಗೋಲ್ಡ್ ಮೆಡಲಿಸ್ಟ್‌ಗಳು ಲೆಕ್ಚರ್ಸ್ ಆಗಿ ಸೇವೆ ಮಾಡುತ್ತಿದ್ದವರ ಸೇವೆ ಇನ್ನೂ ಖಾಯಂ ಆಗಿಲ್ಲ. ಹಂಗಾಮಿ ಲೆಕ್ಚರ್ಸ್ ಆಗಿ ೧೦೫ ಜನರು ಇದ್ದರು, ಅವರಲ್ಲಿ ೫೨ ಜನರನ್ನು ಪಾತ್ರ ಖಾಯಂ ಮಾಡಿದ್ದಾರೆ. ಅವರು ಮೊನ್ನೆ ಇಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದರು. ಇದು ನಮ್ಮ ದೇಶದಲ್ಲಿ ಒಂದು ದುರಂತ. ಯೂನಿವರ್ಸಿಟಿಗಳಲ್ಲಿ ಅವರ ಸಬ್ಜೆಕ್ಟ್‌ಗಳಲ್ಲಿ ರೀಸರ್ಚ್ ಮಾಡಿ ಪಿ. ಎಚ್. ಡಿ. ಮಾಡಿಕೊಂಡು ಎರಡು ಮೂರು ವರ್ಷಗಳ ಕಾಲ ಗುತ್ತಿಗೆ ಆಧಾರದ ಮೇಲೆ ಲೆಕ್ಚರರ್ ಆಗಿ ಕೆಲಸ ಮಾಡಿದ್ದರೂ ಸಹ ಅವರ ಕೆಲಸ ಖಾಯಂ ಮಾಡಿಲ್ಲ. ಅವರ ಕೆಲಸವನ್ನು ಖಾಯಂ ಮಾಡಿದ್ದರೆ ಯಾರೂ ತಕರಾರು ಮಾಡುತ್ತಿರಲಿಲ್ಲ. ಅಲ್ಲಿ ರೋಸ್ಟರ್ ಸಿಸ್ಟಂ ವಿರುದ್ಧವೇನೂ ಆಗುತ್ತಿರಲಿಲ್ಲ. ಅಲ್ಲಿ ೧೦೫ ಜನರ ಪೈಕಿ ೨೦ ಜನ ಎಸ್ ಸಿ ಮತ್ತು ಎಸ್ ಟಿ ಯವರು ಇದ್ದಾರೆ. ಯಾರು ಎರಡು ವರ್ಷ ಅಕ್ಯಾಡೆಮಿಕ್ ಸರ್ವಿಸ್‌ನಲ್ಲಿರುತ್ತಾರೋ ಅವರನ್ನು ಖಾಯಂ ಮಾಡಬಹುದಾಗಿತ್ತು. ಈ ಮಸೂದೆಯಲ್ಲಿ ಆದ ತಪ್ಪು ಕೊನೆಗೆ ಮಾನ್ಯ ಜೀವರಾಜ ಆಳ್ವರವರಿಗೂ ಗೊತ್ತಾಯಿತು ಆಗ ಅವರು ಇಲಾಖೆಗೆ ಒಂದು ಪತ್ರ ಬರೆದು, ಎಲ್ಲಿ ತಪ್ಪಾಗಿದೆ ಎಂದು ನೋಡಿ ಅದನ್ನು ಸರಿಪಡಿಸುವುದಕ್ಕೆ ಒಂದಂ ನೋಟ್ ತಯಾರು ಮಾಡಿ ಎಂದು ವಿದ್ಯಾ ಇಲಾಖೆಯ ಸೆಕ್ರೆಟರಿಯವರಿಗೆ ಪತ್ರ ಬರೆದರು. ಈ ವಿಷಯ ಆಗ ಈ ಮಂತ್ರಿಯ ಗಮನಕ್ಕೆ ಬರಲಿಲ್ಲ. ಆದರೆ ಈಗ ಮಾನ್ಯ ಜೀವರಾಜ ಆಳ್ವರವರು ಇಲ್ಲ. ಮಾನ್ಯ ಚಂದ್ರಶೇಖರ್‌ರವರು ಇದ್ದಾರೆ ಈ ವಿಷಯ ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ ಸಣ್ಣ ಸಣ್ಣ ತಪ್ಪುಗಳು ಹೇಗೆ ಆಗುತ್ತವೆ ಎನ್ನುವುದನ್ನು ನೋಡಿ. ಈ ಡಿಪಾರ್ಟ್

ನವರು ಒಪ್ಪಿಗೆ ಕೊಟ್ಟರೆ ಆಯಿತು. ಲಾ ಡಿಪಾರ್ಟ್‌ಮೆಂಟ್ ಎಂದರೆ ಚಿತ್ರಗುಪ್ತ ಬರೆದಿದ್ದನ್ನು ಬ್ರಹ್ಮ ಸರಿ ತಪ್ಪು ಇರುವುದಿಲ್ಲವೆಂದು ಭಾವಿಸಿದಂತೆ. ಈ ಲಾ ಡಿಪಾರ್ಟ್‌ಮೆಂಟ್ ಮಾಡುವುದು. ಆದ್ದರಿಂದ ತಾವು ಈಗ ತಂದಿರತಕ್ಕಂಥ ಪ ಸೂದೆಯಲ್ಲಿ ಏನೊಂದು ವೈಸ್ ಚಾನ್ಸಲರ್‌ಗೆ ಅಧಿಕಾರ ಕೊಟ್ಟಿದ್ದೀರಿ. ಅದರಲ್ಲಿ ತಿದ್ದುಪಡಿ ಅವಶ್ಯಕ ಇದೆ. ಇನ್ನು ಉಳಿದುತಹ ಅಂಶಗಳು ಅಷ್ಟೇನು ಗಂಭೀರವಾಗಿಲ್ಲ. ಯೂನಿವರ್ಸಿಟಿಗಳಲ್ಲಿ ಜಾತಿಯ ಪ್ರಭಾವ ಇರುವುದರಿಂದ ಇಂತಹ ಚಿಕ್ಕಪುಟ್ಟ ವಿಷಯ ಗಳಲ್ಲಿ ತಾರತಮ್ಯ ಮಾಡದೆ ಸೂಕ್ತ ಮಸೂದೆಯನ್ನು ತರಬೇಕೆಂದು ಹೇಳಿ ನಾನು ಈ ಮಸೂದೆಯನ್ನು ವಿರೋಧ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎ. ಉಮಾರಬ್ಬಿ.—ಮಾನ್ಯ ಅಧ್ಯಕ್ಷರೇ ನನ್ನ ಕೈಯಲ್ಲಿ ಇಂಗ್ಲೀಷ್ ಕಾಪಿ ಇರುವುದರಿಂದ ನನಗೆ ಇದು ಅರ್ಥವಾಗಿಲ್ಲವೋ ಏನೋ ಎನ್ನುವುದು ನನ್ನ ಪ್ರಾರಂಭಿಕ ಸಮಸ್ಯೆ. ಇಲ್ಲಿ ಅಮೆಂಡ್‌ಮೆಂಟ್ ಸೆಕ್ಷನ್ ೧೭ ರಲ್ಲಿ ಏನಿದೆ ಎಂದರೆ.

Amendment of Section 17.—In Sub-section (1) of section 17 of the Karnataka State Universites Act, 1976 (Karnataka Act 28 of 1976) (hereinafter referred to as the principal Act), at the end, the following provisions shall be inserted, namely.—

Provided that if any faculty there is no professor, the senior-most reader shall act as the dean and if there is no reader, such teacher as the Vice Chancellor may designate shall act as the Dean

ಈ ವಾಕ್ಯ ಸ್ಪಷ್ಟವಾಗಿ ಇಲ್ಲವೆಂದು ನನಗೆ ಅನಿಸುತ್ತದೆ. ಪ್ರೊಫೆಸರ್ ಇಲ್ಲದಿದ್ದಾಗ. ...''such teacher as the Vice Chancellor may designate shall act as the Dean''.

The Bill reads thus :

... 'Provided that if in any Faculty there is no professor the Senior-most Reader shall act as the Dean and if there is no Reader, such teacher as the vice Chancellor may designate shall act as the Dean''.

No word about shniority of any teacher or definite definition of the teacher is mentioned here. Therefore, the very amendment may kindly be rectified. ಇನ್ನು ಎರಡನೆಯದು ಎಂದರೆ ಮಿತ್ರರಾದ ಭೂಪತಿಯವರು ಹೇಳಿದ ಹಾಗೆ. ಈ ವ್ಯವಸ್ಥೆ ಬಹಳ ಸ್ವಾರ್ಥಪರವಾಗುತ್ತದೆ. ಸೀನಿಯಾರಿಟಿ ಮತ್ತು ಇತರೆ ಕ್ವಾಲಿಫಿಕೇಷನ್ ಗಳನ್ನು ಕನ್ಸಿಡರ್ ಮಾಡದೇ, ಯಾರಾದರು ಒಬ್ಬರಿಗೆ ಉನ್ನತವಾದ ಹುದ್ದೆಯನ್ನು ಕೊಡುವಂಥ ಸಂಪೂರ್ಣ ಅವಕಾಶವನ್ನು ಉಪ ಕುಲಪತಿಗಳಿಗೇ ಕೊಡುವುದಾದರೆ. ಅಲ್ಲಿ ಪಕ್ಷಪಾತ ಧೋರಣೆಗಳು ಬರುತ್ತವೆ. ಹಿಂದಿನ ಅನುಭವದಿಂದ ಇದನ್ನು ಅರ್ಥಮಾಡಿಕೊಳ್ಳಬಹುದು.

(SRI BLASIOUS M. D'SOOZA IN THE CHAIR)

It further says :

''Provided that where the number of Professors in any Faculty does not exceed two, one Professor shall be nominated according to seniority by rotation for a period of one year by the Chancellor on the reecommendation of the Vice-Chancellor''.

My question is very simple. Even if the number of Professors in any Faculty exceeds two what is the problem. Why they do not resort to selection on the basis of seniority ? If it does not exceed 3 what is the difference it makes ? When you are considering the case on the basis of seniority why do you specificially mention here 'does not exceed two'. Here, you have also printed in the Annexure, Extract from the Karnataka State Universities Act, 1976 (Karnataka Act No. 28 of 1976). It reads thus.

> "17 Deans – (1) Every Chairman of the Departmental Council of a Department of Studies, who is a Professor, shall by rotation according to seniority, act as the Dean of the Faculty for a period of two years. Where no Chairman is a Professor, a Professor shall, by rotation according to seniority, act as the Dean of the Faculty for a period of two years"

ಇದರ ಬಗ್ಗೆ ಮಂತ್ರಿಗಳು ವಿವರಣೆಯನ್ನು ಕೊಡಬೇಕು. ಒಂದು ವ್ಯವಸ್ಥೆಯನ್ನು ಅವ್ಯವಸ್ಥೆ ಯೆಂದು ತಿಳಿದುಕೊಂಡು ಮಾಡುವಂಥ ಯಾವ ವ್ಯವಸ್ಥೆ ಏನು ಇದೆಯೋ ಅದು ತೀವ್ರತರವಾದ ವ್ಯವಸ್ಥೆಯನ್ನು ಮಾಡಿದಂತಾಗುತ್ತದೆ. ಪ್ರಮುಖವಾಗಿ ನಾನು ಹೇಳುವುದಾದರೆ. ಇಲ್ಲಿ ಬರೆದಿರು ವಂಥ ವಾಕ್ಯಗಳೇ ಅಷ್ಟು ಸ್ಪಷ್ಟವಾಗಿಲ್ಲ ಯಾವುದೋ ಒಂದು ಅವಸರದಲ್ಲಿ ಯಾವುದೋ ಒಂದು ಕಾರಣಕ್ಕಾಗಿ ಇದನ್ನು ಮಾಡಿದ್ದಾರೋ ಎನ್ನುವ ಸಂಶಯಕ್ಕೆ ಎಡೆಮಾಡಿಕೊಡುತ್ತದೆ. ಶಿಕ್ಷಣ ಇಲಾಖೆಯಲ್ಲಿ ಕಾರ್ಯದರ್ಶಿಗಳಾಗಿ ಬಂದಿರುವ ದಾಸ್ ಅವರು ಬಹಳ ಬುದ್ಧಿವಂತರು. ಅವರು ನಮ್ಮ ಜಿಲ್ಲೆಯಲ್ಲಿ ಅಧಿಕಾರಿಗಳಾಗಿದ್ದಾಗ ಒಳ್ಳೆಯ ಹೆಸರನ್ನು ಪಡೆದಿದ್ದರು. ದಾಸ್‌ರವರು ಈ ಇಲಾಖೆಗೆ ಬಂದ ನಂತರ ಈ ಬಿಲ್ ಡ್ರಾಫ್ಟ್ ಆಯಿತೋ ಅಥವಾ ಅದಕ್ಕೂ ಮೊದಲು ಡ್ರಾಫ್ಟ್ ಆಗಿ ದಾಸ್ ರವರಿಗೆ ತಿಳಿಯದೆ ನೇರವಾಗಿ ಅಸೆಂಬ್ಲಿಗೆ ಯಾಂತ್ರಿಕವಾಗಿ ಬಂದಿದೆಯೋ ಎಂದು ನನಗೆ ತಿಳಿಯುತ್ತಿಲ್ಲ. ಈ ಬಿಲ್‌ನಲ್ಲಿ ಅರ್ಥವಾಗದ ಪದಗಳು ಹೆಚ್ಚಾಗಿವೆ. ತಾವು ಈ ಬಿಲ್‌ನ್ನು ಓದಿದ್ದೀರಾ Are you convinced of my argument ?

MR. CHAIRMAN.—I think the Hon'ble Minister can reply.

SRI B. A. UMARABBA.—What is the meaning of provided that the seniormost professor can act as the Dean' ? What is the very meaning of the sentence ? This may be clarified by the Minister first and then of course. we can take discussion.

MR. CHAIMAN—I request the honr Minister to clarify what he has just stated.

SRI M. CHANDRASHEKAR.—I will read Section 17 from the Karnataka State Universities Act, 1976.

> "Every Chairman of the Departmental Council of a Department of Studies, who is a professor, shall by rotation according to seniority, act as the Dean of the Faculty for a period of two years....."

Now we have inserted a proviso, i. e.,

"Provided that if in any Faculty there is no Professor, the Senior-most Reader shall act as the Dean and if there is no Reader, such teacher as the Vice-Chancellor may designate shall act as the Dean.

Provided further that where no person in any Department of Studies is available to act as the Dean of the Faculty or where the University does not have a Department of Studies for any Faculty, such Professor or Senior-most Reader or Teacher in a Department of Studies of an affiliated College as may be nominated by the Vice-Chancellor shall act as the Dean of the Faculty."

This Portion of Section 17, Every Chairman of the Departmental Council of a Department of Studies, who is a Professor, shall by rotation according to seniority, act as the Dean of the Faculty for a period of two years.....where no Chairman is a Professor, a Professor shall, by rotation according to Seniority, act as the Dean of the Faculty for a period of two years–was substituted in 1986.

The Universities of Gulbarga, Karnataka as well as Bangalore represented to the Government that suppose if there are no Professors, who will be the Dean and some difficulty they expressed in appointing the Dean of a particular faculty. If there are no Professors or Readers, the Faculty must be there Suppose if there are no Professors available atleast to give a chance to the next category they represented the Govt. to amend the Act. ಈಗ ಸೆಕ್ಷೆನ್ ೧೭ಕ್ಕೆ ತಿದ್ದುಪಡಿ ಆಗಿರುವುದರಲ್ಲಿ ಒಂದು ಅಭಿಪ್ರಾಯವನ್ನು ತಾವುಗಳು ಸೂಚನೆ ಮಾಡುತ್ತಾ ಇದ್ದೀರಿ ತಾವು ಹೇಳುವ ಹಾಗೆ ಪ್ರೊಫೆಸರ್ಸ್‌ಗೆ ಸಿನಿಯಾರಿಟಿ ಇದೆ ರೀಡರ್ಸ್‌ಗೆ ಸಿನಿಯಾರಿಟಿ ಇದೆ, ಆದರೆ ಟೀಚರ್ಸ್‌ಗೆ ಇಲ್ಲ ಎಂಬ ಬಗ್ಗೆ ಸೂಚನೆಯನ್ನು ತಾವುಗಳು ಕೊಟ್ಟಿದ್ದೀರಿ. ಅದಕ್ಕೆ ಡಾ. ತಿಮ್ಮೇಗೌಡರು ಒಂದು ಅಮೆಂಡ್‌ಮೆಂಟ್ ತರುತ್ತಾ ಇದ್ದಾರೆ ಆಗ ಇದಂ ಸರಿಹೋಗುವುದು.

SRI B. A. UMARABBA.—You have said.

"Provided that if in any Faculty there is no Professor, the Senior-most Reader shall act the Dean and if there is no Reader, such teacher as the Vice-Chancellor may designate shall act as the Dean."

ಸಿನಿಯಾರಿಟಿ ಬಗ್ಗೆ ಮಾನ್ಯ ಸಚಿವರು ಹೇಳಿದ್ದಾರೆ, ಸಿನಿಯಾರಿಟಿ ವಿಷಯ ಬಂದಾಗ ತಾವು ಕನ್ಫ್ಯೂಡರ್ ಮಾಡುತ್ತೀರಿ ಎಂದು ನನಗನ್ನಿಸುತ್ತದೆ ಯಾಕೆಂದರೆ ಅದನ್ನು ವೈಸ್ ಚಾನ್ಸಲರ್‌ಗೆ ಬಿಟ್ಟರೆ ಏನಾಗುತ್ತದೆಂದು ನಾನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. If there are no Professors and Readers, how the Faculty of the University can run ? It will become a great lapse, You can just think of the problem–why we are not in a position to get sufficient number of Professors and Readers ? when you are so much keen on filling up the post of Dean,

why can't you think of some relaxation to have professors and Readers in the Universities Those vacancies cannot be kept as it is Without having a hand or a leg, having a head will be of no use. He will not become a full-fledged personality without a hand or leg. If you want the University should be full-fledged and it can serve the purpose, then, you can think of filling up of all posts. As you are interested in filling up the post of Dean, you should also take the same interest to have the posts of Professors and Readers filled up soon. If experienced persons or qualified persons are not available for those posts, you can even think of having some relaxation for those people also so that the teachers below the rank of Professor or Reader will have an opportunity to serve as Professors or Readers. I suggest that major amendments to be brought to the Karnataka Universities Act to solve these various problems. With these words I conclude my speech.

† ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಅಧ್ಯಕ್ಷರೇ, ಕಳೆದ ಬಜೆಟ್ ಅಧಿವೇಶನದಲ್ಲಿ ಶಿಕ್ಷಣ ಇಲಾಖೆಯ ಮೇಲೆ ಪ್ರಥಮ ಭಾಷಣ ಮಾಡುವ ಒಂದು ಅವಕಾಶ ನನಗೆ ಬಂದಾಗ ಶಿಕ್ಷಣ ರಂಗವನ್ನು ಕುರಿತು ಅನೇಕ ವಿಚಾರಗಳನ್ನು ಹೇಳಿದ್ದೆನು. ಶಿಕ್ಷಣ ರಂಗದಲ್ಲಿ ಅನೇಕ ಕಮೀಷನ್‌ಗಳು ಬಂದವು, ಹೈಕೋರ್ಟ್ ತೀರ್ಮಾನಗಳಾಗಿವೆ, ವೇತನ ಸರಣಿ, ವೇತನ ಮಂಜೂರಾತಿ ಅಥವಾ ಹಂಗಾಮಿ ಹುದ್ದೆಯನ್ನು ಖಾಯಂಗೊಳಿಸುವುದು ಇಂಥಾದ್ದೆಲ್ಲ ಆಗಬೇಕಾಗಿರುವ ಸಂದರ್ಭದಲ್ಲಿ ಇವತ್ತಿನ ಶಿಕ್ಷಣ ಸಚಿವರು ಇದನ್ನೆಲ್ಲ ಪರಿಶೀಲಿಸಿ ಬೇಗನೆ ಕ್ರಮ ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆ ಕೊಟ್ಟಿದ್ದರು ಅನೇಕ ತಿಂಗಳುಗಳ ನಂತರ ಈ ಬಜೆಗೆ ಬಂದಿದ್ದು ಈ ಚಿಕ್ಕ ಪುಸ್ತಕದ ಅಷ್ಟೆ ಆದ್ದರಿಂದ ಇದು ಚಿಂತನೆ ಮಾಡುವಂಥ ಸರ್ಕಾರವೇ ಎಂದು ಕೇಳಲು ಬಯಸುತ್ತೇನೆ ವಿಶ್ವವಿದ್ಯಾನಿಲಯಗಳ ಹಂಗಾಮಿ ಅಧ್ಯಾಪಕರನ್ನು ಖಾಯಂ ಮಾಡಿ ಎಂದು ಆಕ್ಷೇ ರಿಂದ ಕೇಳುತ್ತಿದ್ದರೂ ಸಹ ಅದನ್ನು ಮಾಡಲಿಲ್ಲ ಅವರಲ್ಲಿ ಎಷ್ಟೋ ಎಸ್‌ಸಿ ಎಸ್‌ಟಿ ಅಧ್ಯಾಪಕರು ಪಾಪ ವಯಸ್ಸಾದವರಿದ್ದು ನೀವು ಖಾಯಂ ಮಾಡದಿದ್ದರೆ ಅನ್ಯಾಯವಾಗುತ್ತದೆ ಎಂದು ಹೇಳಿದರೂ ಉಪಯೋಗ ಆಗಿಲ್ಲ. ಇದರ ಬಗ್ಗೆ ಮೊದಲು ಕ್ರಮ ಕೈಗೊಳ್ಳಬೇಕಾದದ್ದು ಅಗತ್ಯ. ಇವತ್ತು ತಂದಿರುವ ಅಮೆಂಡ್‌ಮೆಂಟ್ ಬಿಲ್ ಬಗ್ಗೆ ಖರ್ಗೆಯವರು ಮತ್ತು ಮೊಯಿಲಿಯವರು ನಿರೂಪಿಸಿರುವಂತೆ ನಾಟ್ ಪ್ರಾಪರ್ಲಿ ಡ್ರಾಫ್ಟೆಡ್ ಅಂತ ಅನಿಸುತ್ತದೆ. ಎಲ್ಲಿ ಪ್ರೊಫೆಸರ್ ಇರುವುದಿಲ್ಲವೋ ಅಲ್ಲಿ ಡೀನ್ ಅಂತ ಇರಬೇಕಾಗಿತ್ತು. Here you have said "such teacher as the V. C. designate" what is the definition for "Teacher" ಟೀಚರ್ ಅಂದರೆ ಅದರ ಡೆಸಿಗ್ನೇಷನ್ ಏನು? ಲೆಕ್ಚರರೋ ಅಥವಾ ರೀಡರೋ ಅಂತ ನಮೂದಿಸ ಬೇಕಾಗುತ್ತದೆ, ಅಲ್ಲದೆ ವೈಸ್ ಚಾನ್ಸಲರ್ ಅವರಿಗೆ ಫುಲ್ ಪವರ್ ಕೊಡುತ್ತಿದ್ದೀರಿ. ಇದರ ಪರಿಣಾಮ ವಿನಾಕಾರಣ ಎಂದರೆ ಒಂದು ಉದಾಹರಣೆಯಂತೆ ನಮ್ಮ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಳೆದ ಕೆಲವು ದಿನಗಳ ಹಿಂದೆ ನೇಮಕಾತಿ ಬಗ್ಗೆ ಪತ್ರಿಕೆಗಳಲ್ಲಿ ಬಂದ ವಿಷಯ ಹಾಗೂ ಈ ಬಗ್ಗೆ ಸಿಂಡಿಕೇಟ್‌ನಲ್ಲಿ ಚರ್ಚೆಯಾದ ವಿಷಯ ಎಲ್ಲರಿಗೂ ಗೊತ್ತಿದೆ. ಬೇಕಾದಷ್ಟು ಅರ್ಜಿದಾರರಿದ್ದರೂ ಅಲ್ಲಿನ ವಿ. ಸಿ. ಅವರು ತಮಗೆ ಬೇಕಾದವರನ್ನು ನೇಮಿಸಿಕೊಂಡಿದ್ದಾರೆ ಎಂಬುದು ಜನಜನಿತವಾದ ವಿಚಾರ ವಿಶ್ವವಿದ್ಯಾನಿಲಯ ಒಂದು ಸ್ವಾಯತ್ತ ಸಂಸ್ಥೆ.

ಆದ್ದರಿಂದ ಒಂದು ಸಲ ನೇಮಕ ಮಾಡಿಕೊಂಡ ಮೇಲೆ ಮತ್ತೆ ಏನೂ ಮಾಡುವುದಕ್ಕೆ ಆಗುವುದಿಲ್ಲ ಫುಲ್ ಪವರ್ ಅನ್ನು ವೈಸ್‌ಚಾನ್ಸಲರ್‌ಗೆ ಕೊಡುವಾಗ ಬಹಳವಾಗಿ ಆಲೋಚನೆ ಮಾಡಬೇಕಾಗುತ್ತದೆ. ನಾಳೆ ಪ್ರಭಾವ ಬರಬಹುದು ಸ್ವಯಂ ಪ್ರೇರಿತವಾದ ಕೆಲವು ಆಸಕ್ತಿಗಳು ಕೆಲಸಮಾಡಬಹುದು. ಹೀಗಾಗದಂತೆ ತಡೆಗಟ್ಟಬೇಗಾದುದು ಅತೀ ಅಗತ್ಯವಾಗಿದೆ. ಅವರು ಎಷ್ಟರತನಕ ಎಲ್ಲಿಯವರೆಗೆ ಅನಿರ್ಬಂಧಿತವಾಗಿ ಡೀನ್ ಆಗಿರುತ್ತಾರೆ ಎಂಬುದನ್ನು ವಿಚಾರ ಮಾಡಬೇಕು. ಯಾರ್ಯಾರು ಯಾವ್ಯಾವ ಪೊಸಿಷನ್‌ನಲ್ಲಿರಬೇಕು ಎಂಬುದನ್ನು ಆಯಾಯ ಗ್ರೇಡ್‌ನ ಸೀನಿಯಾರಿಟಿಯಲ್ಲಿ ಮಾಡಬೇಕು.

ಹೈದರಾಬಾದ್ ಬಾಂಬೆ ಸ್ಕೇಲ್‌ನ ಸಮೀಕರಣ ಇನ್ನೂ ಆಗಲಿಲ್ಲ ಇನ್ನೂ ಇದನ್ನು ಕುರಿತು ಚಿಂತನೆ ನಡೆದಿದೆ ಇನ್ನೂ ತಲೆಮಾರುಗಳ ಕಾಲ ಇದರ ಚಿಂತನೆ ನಡೆಯುತ್ತದೆ. ಸರಕಾರ ಇದನ್ನು ನಿಗದಿ ಮಾಡುವುದಕ್ಕೆ ಏಕೆ ಸಾಧ್ಯವಾಗುವುದಿಲ್ಲ. It is stated like this.

> "Provided further that where no person in any Department of Studies is available to act as the Dean of the Faculty or where the University does not have a Department of Studies for any Faculty, such Professor or Seniormost Reader or Teacher in a Department of Studies of an affiliated College as may be nominated by the Vice Chancellor shall act as the Dean of the Faculty."

ಯಾವುದೇ ಡಿಪಾರ್ಟ್‌ಮೆಂಟ್ ಇಲ್ಲದೇ ಇದ್ದಾಗ ಬೇರೆ ಯಾವುದೇ ಇಲಾಖೆಯ ಒಬ್ಬರು ಅಧ್ಯಾಪಕರನ್ನು ತಂದು ನೇಮಕ ಮಾಡಬಹುದು. ಮಾನ್ಯ ಅಧ್ಯಕ್ಷರೇ, ತಾವು ಇದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಬೇಕು. ಯಾವುದೇ ಇಲಾಖೆಯ ಹುದ್ದೆಗಳು ಖಾಲಿಯಾದಾಗ ಯಾವುದೇ ಇಲಾಖೆಯ ಒಬ್ಬ ಅಧ್ಯಾಪಕನನ್ನು ತಂದು ನೇಮಕ ಮಾಡಬಹುದು. ಅದೇ ಇಲಾಖೆಯವರಾಗಬೇಕೆಂದೇನೂ ಇಲ್ಲವೆಂದು ಹೇಳಿದ್ದಾರೆ. ಸೆಕ್ ಡಿಪಾರ್ಟ್‌ಮೆಂಟ್ ಅನ್ನುವ ಶಬ್ದವಾದರೂ ಇಲ್ಲ ಬರಬೇಕಾಗಿತ್ತು ಒಂದು ಇಲಾಖೆಯಲ್ಲಿ ಡೀನ್ ಎಂದು ನೇಮಕ ಮಾಡಬೇಕಾದರೆ ಅದೇ ಇಲಾಖೆಯಲ್ಲಿ ಕೆಲಸಮಾಡುತ್ತಿರುವವರನ್ನು ಮಾಡಬೇಕು ಅದನ್ನು ಬಿಟ್ಟು ಕನ್ನಡ ವಿಭಾಗಕ್ಕೆ ಫಿಸಿಕ್ಸ್ ವಿಭಾಗದವರನ್ನು ತಂದು ಡೀನ್ ಮಾಡುವುದಕ್ಕಾಗುವುದಿಲ್ಲ. ಮಾಡುತ್ತೇವೆಂದು ಹೇಳುವುದಲ್ಲ ಅದು ಬೇರೆ ವಿಚಾರ ಈ ವ್ಯವಸ್ಥೆಯಲ್ಲಿ ಆ ಅವಕಾಶವಿದೆ ಆ ರೀತಿಯಾಗದಂತೆ ನೋಡಿಕೊಳ್ಳಬೇಕು ಡೀನ್ ಆಗಬೇಕಾದರೆ ಎಕ್ಸ್‌ಪೀರಿಯನ್ಸ್ ಬೇಕು ಕ್ವಾಲಿಫಿಕೇಷನ್ ಬೇಕು ಯಾವುದೋ ಪ್ರಭಾವಕ್ಕೆ ಒಳಗಾಗಿ ಯಾರನ್ನಾದರೂ ನೇಮಕ ಮಾಡಬಹುದು, ವೈಸ್ ಛಾನ್ಸಲರ್‌ಗೆ ಫುಲ್ ಪವರ್ ಎಂದು ಕೊಡುವಂತಹ ವ್ಯವಸ್ಥೆಯಾವುದು ಇದೆ ಅದನ್ನು ನಾನು ವಿರೋಧಿಸುತ್ತೇನೆ. ಈ ತಿದ್ದುಪಡಿ ಬಿಲ್ ಏನು ಸಭೆ ಮುಂದೆ ಇಟ್ಟಿದ್ದೀರಿ ಅದನ್ನು ವಾಪಸ್ ತೆಗೆದುಕೊಂಡು ಪುನರ್ ಪರಿಶೀಲನೆ ಮಾಡಿ ಸಮಗ್ರವಾದ ಮಸೂದೆ ತರಬೇಕು ಶಿಕ್ಷಣ ರಂಗದಲ್ಲಿ ಅನೇಕ ಕಾರ್ಯಕ್ರಮಗಳು ಇವೆ ಅದರ ಬಗ್ಗೆ ಚಿಂತನೆಯಾಗಬೇಕೆಂದು ಹೇಳುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಈ ಯೂನಿವರ್ಸಿಟಿ ಬಿಲ್ ಅನ್ನು ಏನು ಮಾನ್ಯ ವಿದ್ಯಾ ಮಂತ್ರಿಗಳು ತಂದಿದ್ದಾರೆ. ಇದರಲ್ಲಿ ಇನ್ನೂ ಕೆಲವು ಅಮೆಂಡ್‌ಮೆಂಟ್ಸ್‌ಗಳನ್ನು ಕಾಂಪ್ರಹೆನ್ಸಿವ್ ಆಗಿ ತಂದಿದ್ದರೆ ಚೆನ್ನಾಗಿರುತ್ತಿತ್ತೆಂದು ನನಗನ್ನಿಸುತ್ತದೆ. "Professor or Seniormost Reader or Teacher of an affiliated College" ಎಂದು ಇಲ್ಲಿ ಹೇಳುತ್ತಾರೆ ಇಷ್ಟಾ ಅಫಿಲಿಯೇಷನ್ ಗತಿ ಏನಾಗಿದೆ ಎಂಬುದನ್ನು ವಿಚಾರ ಮಾಡಬೇಕು ಇದರಲ್ಲಿ ಗವರ್ನ್‌ಮೆಂಟ್ ಕಾಲೇಜು, ಖಾಸಗೀ ಕಾಲೇಜು ಎರಡೂ ಬರುತ್ತವೆ. ಖಾಸಗೀ ಕಾಲೇಜ್‌ಗಳಿಗೆ ಆಟಾನಮಿ ಕೊಡಂತ್ತೇವೆ ಸ್ವಾಯತ್ತತೆ ಕೊಡುತ್ತೇವೆಂದು ತಾವು ಹೇಳುತ್ತಿದ್ದೀರಿ ಆದರೆ ಅಲ್ಲಿ ಯಾವ ರೀತಿ ನಡೆಯುತ್ತಿದೆಯೆಂದು ನಾನು ತಮಗೆ ಹೇಳಬೇಕಾಗಿಲ್ಲ. ನಮ್ಮ ಕರ್ನಾಟಕದಲ್ಲಿ ಪ್ರೈವೇಟ್ ಮ್ಯಾನೇಜ್‌ಮೆಂಟ್ ಇರುವ ಕಾಲೇಜುಗಳು ಜಾಸ್ತಿಯಾಗಿ ನಮ್ಮ ಸರಕಾರೀ ಕಾಲೇಜುಗಳ ಅವ್ಯವಸ್ಥೆ ಯಾವ ರೀತಿಯಾಗಿದೆ. ಅಲ್ಲಿ ಯಾವ ರೀತಿ ನಡೆಯುತ್ತಿದೆ ಎಂಬುದನ್ನು ವಿಚಾರ ಮಾಡಬೇಕು. ಪ್ರೈವೇಟ್ ಮ್ಯಾನೇಜ್‌ಮೆಂಟ್‌ಸರನ್ನು ಮಂತ್ರಿ ಎನ್‌ಕರೇಜ್ ಮಾಡಿ ಈಗಿರುವ ವ್ಯವಸ್ಥೆಯನ್ನು ಹಾಳು ಮಾಡುವುದು ಬೇಡ ವಿದ್ಯಾ ರಂಗವನ್ನು ಪ್ರೈವೇಟ್ ಮ್ಯಾನೇಜ್‌ಮೇಂಟನವರಿಗೆ ಮಾಡಬೇಡಿ. ಅವರನ್ನು ಡೀನ್ ಆಗಿ ಮಾಡಬೇಡಿ, ಈ ರೀತಿ ಮಾಡಿದರೆ ನಮ್ಮಲ್ಲಿರುವ ಅಲ್ಪಸ್ವಲ್ಪ ವಿದ್ಯಾ ಪ್ರಗತಿ ಏನು ಇದೆ ಅದು ಹಾಳಾಗುತ್ತದೆ. ಇದರ ಬಗ್ಗೆ ಇದರಲ್ಲಿ ಸರಿಯಾದ ಸ್ಪಷ್ಟನೆ ಇಲ್ಲ That may become a fundamental question. ಸ್ವಾಯತ್ತತೆ ಕೊಡುವ ಬಗ್ಗೆ ಸೀರಿಯಸ್ಸಾಗಿ ಯೋಚನೆ ಮಾಡಿ. ಆಟಾನಮಿ ಕೊಡುವುದು ಬೇಡ ಹಿಂದೆ ನೀವು ಆಟಾನಮಿ ಕೊಟ್ಟರೆ ಹಿಂದೆ ಜೋಡಿದಾರರು ಇದ್ದ ಹಾಗಾಗುತ್ತದೆ. ಈಗಲೇ ಆಗಿದ್ದಾರೆ. ಅದನ್ನು ಇನ್ನೂ ಹೆಚ್ಚು ಮಾಡಬೇಡಿ. ಹಿಂದೆ ಮಹಾರಾಜರು ಏನು ಜೋಡಿಯನ್ನು ನಿಡುತ್ತಿದ್ದರು ಅದೇ ರೀತಿಯಾಗಿ ಇವುಗಳು ಕೂಡ

ಸಂಸ್ಥಾನಗಳನ್ನು ಡೆವಲಪ್ ಮಾಡುತ್ತವೆ ಈಗಲೇ ಸಂಸ್ಥಾನಗಳು ಡೆವಲಪ್ ಆಗಿದ್ದು ವಿದ್ಯಾ ರಂಗದಲ್ಲಿ ಕೋಟಿಗಟ್ಟಲೆ ಹಣವನ್ನು ದುಡಿಯುತ್ತಿದ್ದಾರೆ ಅಂತಹವರನ್ನು ಡೀನ್ ಆಗಿ ಹಾಕುವುದು ಬೇಡ.

ಎರಡನೆಯದು, ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಈ ಶಿಕ್ಷಣ ರಂಗದಲ್ಲಿ ಬಹಳ ಮಾರಲ್ ಡಿಗ್ರೆಡೇಷನ್ ಇಲ್ಲ, ಎಲ್ಲಾ ಡಿಗ್ರೇಡ್ ಆಗಿದೆ, ಇದು ಎಲ್ಲಿಗೆ ಹೋಗಿದೆ ಎಂದರೆ ನಾವು ಎಲ್ಲಿಗೆ ಹೋಗುತ್ತಿದ್ದೇವೆಯೋ ಎಂದು ಗೊತ್ತಾಗುತ್ತಿಲ್ಲ. ಇದರಲ್ಲಿ ಸರ್ಕಾರದ ನಡವಳಿಕೆ ಕೂಡಾ ತಪ್ಪು ಉಂಟು. ವಿದ್ಯಾರ್ಥಿಗಳು ಇದ್ದಾರೆ ಎನ್ನುವ ಯೋಚನೆಯೇ ಇರುವುದಿಲ್ಲ. ಏನೋ ಒಂದು ಕಾಲೇಜನ್ನು ಸ್ಥಾಪನೆ ಮಾಡಿಬಿಡುವುದು, ಅದನ್ನು ಪ್ರೈವೇಟ್ ಮ್ಯಾನೇಜ್‌ಮೆಂಟ್‌ಗೆ ಕೊಡುವುದು, ಅವರು ಅದನ್ನು ಎಕ್ಸ್‌ಪ್ಲಾಯಿಟೇಷನ್ ಮಾಡುವುದು. ಆ ವಿದ್ಯಾರ್ಥಿಗಳ ಬಗ್ಗೆ ಯೋಚನೆಯನ್ನು ಮಾಡುವುದಕ್ಕೂ ಕೂಡಾ ಬಿಡುವುದಿಲ್ಲ. ನಾನು ಕೇಳಿಕೊಳ್ಳುವುದು ಏನೆಂದರೆ ವಿದ್ಯಾರಂಗದಲ್ಲಿ ಹೆಚ್ಚಾಗಿ ವಿದ್ಯಾರ್ಥಿಗಳಿಗೆ ಪ್ರಾಮುಖ್ಯತೆಯನ್ನು ಕೊಡಬೇಕು. ಈಗ ನೀವೇನಾದರೂ ಕೇರಳ ರಾಜ್ಯಕ್ಕೆ ಹೋದರೆ, ಆಂಧ್ರ ರಾಜ್ಯಕ್ಕೆ ಹೋದರೆ ಅನೇಕ ಕಡೆ ವಿದ್ಯಾರ್ಥಿಗಳು ಯೂನಿಯನ್‌ಗಳನ್ನು ಮಾಡಿಕೊಂಡಿದ್ದಾರೆ. ವಿದ್ಯಾರ್ಥಿಗಳನ್ನು ಸೆನೆಟ್ ಮೆಂಬರ್‌ಗಳನ್ನಾಗಿ ಮಾಡಿದ್ದಾರೆ. ಮತ್ತು ಅವರ ಕೋ-ಆಪರೇಷನನ್ನು ಕೂಡಾ ತೆಗೆದುಕೊಳ್ಳುತ್ತಾರೆ. ನಾನು ಇದರ ಬಗ್ಗೆ ಮೊನ್ನೆ ಒಂದು ಪ್ರಶ್ನೆಯನ್ನು ಎಂ. ಚಂದ್ರಶೇಖರ್‌ರವರಿಗೆ ಕೇಳಿದ್ದೆ ಏಕೋ ಯೂನಿಯನ್ಸ್ ಮಾಡುವುದಕ್ಕೆ ಇವರಿಗೆ ಭಯ. ಇವರು ಮಾತ್ರ ಎಲೆಕ್ಟೆಡ್ ರೆಪ್ರೆಸೆಂಟೇಟಿವ್ಸ್ ಆಗಿ ಗೆದ್ದು ಬರಬಹುದು. ಇಲ್ಲಿ ಬಂದು ನಾನು ಅಸೆಂಬ್ಲಿ ಮೆಂಬರ್, ನಾನು ಮಂತ್ರಿ ಎಂದು ಹೇಳಿಕೊಳ್ಳುತ್ತಾರೆ. ಇದೇರೀತಿ ವಿದ್ಯಾರ್ಥಿಗಳಿಗೂ ಕೂಡಾ ಅವಕಾಶವನ್ನು ಮಾಡಿಕೊಡಬೇಕು ಅವರಲ್ಲಿಯೇ ಒಂದು ಯೂನಿಯನ್ನು ಮಾಡಿಕೊಳ್ಳಲಿ, ವಿದ್ಯಾರ್ಥಿಗಳ ಸಹಕಾರವನ್ನು ಕೂಡಾ ಪಡೆಯಿರಿ, ಕೇರಳದಲ್ಲಿ ಈ ರೀತಿಯಾಗಿ ಕೊಟ್ಟಿದ್ದಾರೆ. ವಿದ್ಯಾರ್ಥಿಗಳನ್ನೇ ಸೆನೆಟ್ ಮೆಂಬರ್ಸ್ ಮಾಡಿದ್ದಾರೆ. ನಿಜವಾಗಿ ಇಲ್ಲಿ ಇರುವಷ್ಟು ಒಂದು ಇನ್‌ಡಿಸಿಪ್ಲಿನ್ ಅಲ್ಲಿ ಇಲ್ಲ. ಇಲ್ಲಿ ಮಾತ್ರ ಅದಕ್ಕೆ ಅವಕಾಶವನ್ನೇ ಕೊಡುವುದಿಲ್ಲ, ಭಯ ಬೀಳುತ್ತಾರೆ. ಏಕೆಂದರೆ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರು ಸಾವಿರಾರು ರೂಪಾಯಿ ಲೂಟಿ ಮಾಡುತ್ತಾರೆ, ಅವರಿಗೆ ಏನೂ ಫೆಸಿಲಿಟೀಸನ್ನು ಕೊಡುವುದಿಲ್ಲ. ವಿದ್ಯಾರ್ಥಿಗಳಿಗೆ ಯೂನಿಯನ್ ಕೊಟ್ಟು ಬಿಟ್ಟರೆ ಇವರೆಲ್ಲರೂ ಎಲ್ಲಿ ತಿರುಗಿ ಬೀಳುತ್ತಾರೋ ಎಂದು ಕೂಡು ಅವರ ಒಗ್ಗಟ್ಟು ಆಗದಂತೆ ಮಾಡಿ ಅವರಿಗೆಗಳಿಗೆ ಯೂನಿಯನ್ನನ್ನು ಕೊಟ್ಟಿಲ್ಲ. ನಾನು ಕೇಳಿಕೊಳ್ಳುವುದೇನೆಂದರೆ ವಿದ್ಯಾರ್ಥಿಗಳಿಗೆ ಅದನ್ನು ಕೊಡಿ ಎಂದು ನಾನು ಕೇಳಿಕೊಳ್ಳುತ್ತೇನೆ. ಜೊತೆಗೆ ಇಷ್ಟೆಲ್ಲವ ಮಾಡುತ್ತೀರಿ, ಟೀಚರ್ಸ್‌ಗಳನ್ನು ಖಾಯಂ ಮಾಡಿದ್ದೀರಾ ? ತಮ್ಮ ಮುಖಾಂತರ ಒಂದು ಮೆಮೊರಾಂಡಂನ್ನು ಕಳುಹಿಸುತ್ತೇನೆ. ಯೂನಿವರ್ಸಿಟಿಗಳು ಹೇಗೆ ನಡೆಯುತ್ತಿವೆ ಎಂದು ಹೇಳಿಬಿಟ್ಟರೆ ಹತ್ತಾರು ವರ್ಷಗಳಿಂದಲೂ ಟೆಂಪೊರರಿ ಟೀಚರ್ಸ್‌ಗಳೇ ಇದ್ದಾರೆ. ಗ್ರೆಗೊರಿ ಡಿಸೌಜ, ೪೭ ವರ್ಷ ಡಾ. ಪೆಟ್ಟಾರ್ ೩೩ ವರ್ಷ, ಬಿ. ಜೀವಾಜಿ ೪೪ ವರ್ಷ, ಪೋಲೀಸ್ ಪಾಟೀಲ್ ೪೦ ವರ್ಷ, ಸಿ. ಬಿ. ರಾಜೇಶ್ವರಿ ೩೦ ವರ್ಷ, ಗೋಲ್ಡ್ ಮೆಡಲಿಸ್ಟ್, ಹಬೀಬ್ ಸಹನಾ, ಗೋಲ್ಡ್ ಮೆಡಲಿಸ್ಟ್ ಇವರೆಲ್ಲರೂ ರೆಕ್ರೂಟ್‌ಮೆಂಟ್ ಆಗಿ ಹತ್ತಾರು ವರ್ಷಗಳೇ ಆಗಿದೆ. ಇದುವರೆಗೂ ಕನ್‌ಫರ್ಮ್ ಆಗಿಲ್ಲ. ಟೀಚರ್ಸ್ ಇಲ್ಲ ಎಂದು ಹೇಳಿ ಒಂದು ದೊಡ್ಡ ಸಮಸ್ಯೆ ಇದೆ. ಆವರು ಬಂದು ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ದಯವಿಟ್ಟು ಯೂನಿವರ್ಸಿಟಿಗಳಲ್ಲಿ ಲೆಕ್ಚರರ್ಸ್‌ಗಳನ್ನು ಅಪಾಯಿಂಟ್ ಮಾಡಿಕೊಳ್ಳಿ. ನೀವು ಹೇಳುವುದು ಏನೆಂದರೆ ಸೀನಿಯರ್ ಲೆಕ್ಚರರ್ಸ್ ಯಾರು ಇರುತ್ತಾರೆ, ಅವರನ್ನು ಅಪಾಯಿಂಟ್ ಮಾಡಿಕೊಳ್ಳುತ್ತೇವೆ. ಅವರೇ ಡೀನ್ ಆಗಲಿ ಎಂದು ಹೇಳುತ್ತೀರಿ ಟೀಚರ್ಸ್‌ಗಳೇ ಇಲ್ಲವೇ ? ಇಲ್ಲದಿದ್ದರೆ ಏನು ಮಾಡುವುದು ? ಈಗ ಅಲ್ಲಿ ಇಲ್ಲ ಎಂದು ನೀವೇ ಒಪ್ಪಿಕೊಳ್ಳುವ ಹಾಗೆ ಆಯಿತು. ಇರುವ ಲೆಕ್ಚರರ್‌ಗಳನ್ನು ಖಾಯಂ ಮಾಡಿದರೆ ಅವರೇ ಖಾಯಂ ಆಗುತ್ತಾರೆ. ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ಲೆಕ್ಚರರ್ಸ್‌ಗಳನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಿ. ಡೀನ್ ಇಲ್ಲ ಎಂದು ಹೇಳುವಂಥ ಪರಿಸ್ಥಿತಿ ಬೇಡ. ಈಗಲೂ ಶಿಕ್ಷಣ ರಂಗದಲ್ಲಿ ಒಂದೊಂದು ಯೂನಿವರ್ಸಿಟಿಯೂ ಕೂಡಾ ಒಂದೊಂದು ಜಾತಿಗೆ ಹೆಡ್‌ಕ್ವಾರ್ಟರ್ಸ್ ಆಗುತ್ತಿದೆ. ಅಲ್ಲಿ ಜಾತಿ, ಮತ, ಕಲಹಗಳನ್ನು ಹುಟ್ಟಿಸುವ ಜಾಗವಾಗಿದೆ. ಜಾತಿ ವಿಷಯದಲ್ಲಿ ನೋಡಿದರೆ ಡೀನ್ ಎಷ್ಟು ಪ್ರಭಾವವನ್ನು ಬೀರುತ್ತಾರೆ ಎಂದು ನೋಡಿದರೆ ಗೊತ್ತಾಗುತ್ತದೆ. ನಮ್ಮ ಸ್ನೇಹಿತರು ಇದ್ದರು, ಸರಿಯಾಗಿ ಓದಿಲ್ಲ, ನನಗೆ ಡಿಗ್ರಿ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳಿದಾಗ ಕುಳಿತುಕೊಳ್ಳೋ ನಾನು ನೋಡುತ್ತೇನೆ ಎಂದು ಬಲಾತ್ಕಾರ ಮಾಡಿ ಡಿಗ್ರಿ ಕೊಟ್ಟು ಕಳುಹಿಸಿದ್ದಾರೆ. ದಯವಿಟ್ಟು ಈ ಫ್ಯಾಕಲ್ಟಿಗೆ ಡೀನ್‌ಗಳನ್ನು

ಸೆಲೆಕ್ಟ್ ಮಾಡುವಾಗ ಒಳ್ಳೆಯವರನ್ನು ಸಚ್ಚಾರಿತ್ರ್ಯವುಳ್ಳವರನ್ನು ಆಯ್ಕೆ ಮಾಡಬೇಕು. ಜಾತಿ, ಮತ, ಕುಲ, ಇವುಗಳನ್ನು ಬೇಸ್ ಮಾಡಿ ವಿದ್ಯಾಭ್ಯಾಸವನ್ನು ಪಾರಾಟ ಪಾಡತಕ್ಕಂಥವರನ್ನು ಅವಾಯ್ಡ್ ಮಾಡಿ. ಅವರ ಕಾನ್ಫಿಡೆನ್ಷಿಯಲ್ ರಿಕಾರ್ಡ್‌ಗಳನ್ನು ನೋಡಿ. ಸಿನಿಯಾರಿಟಿ ಎನ್ನುವ ಒಂದೇ ಬೇಸಿಸ್ ಬೇಡ. ಬೇಸಿಸ್ ಮಾಡುವುದಕ್ಕೆ ಹೋದರೆ ಆರ್ಬಿಟ್ರರಿ ಮಾಡುವುದಕ್ಕೆ ಹೋದರೆ ಸೀನಿಯಾರಿಟಿ ಇದ್ದವನಿಗೆ ಕೊಟ್ಟರೆ ಈ ರೀತಿ ಆಗುತ್ತದೆ. ೩೦ ವರ್ಷ ಆಗಿರುತ್ತದೆ. ಇನ್ನು ಒಂದೋ ಎರಡು ವರ್ಷ ಇರುವಾಗ ವ್ಯಾಪಾರವನ್ನು ಶುರುಮಾಡುತ್ತಾರೆ. ಪಾಸ್ ಮಾಡಬೇಕು. ಇಂಟರ್‌ನಲ್ ಮಾರ್ಕ್ಸ್‌ನ್ನು ಕೊಡಬೇಕಂ ಎಂದರೆ ಇಷ್ಟು. ಪಾಸ್ ಮಾಡಬೇಕೆಂದರೆ ಇಷ್ಟು ಇಲ್ಲದಿದ್ದರೆ ಯಾವ ಜಾತಿ ಎಂದು ಹೇಳಿದರೆ ಜಾತಿ ಕುಲ, ಮತ ಇವೆಲ್ಲಾ ಬಂದುಬಿಡುತ್ತವೆ. ಆಗ ವಿದ್ಯಾಭ್ಯಾಸ ಯಾವ ಪ್ರಗತಿಗೆ ಬರಬೇಕೋ ಮತ್ತು ಅಲ್ಲಿನವರು ಯಾವ ರೀತಿಯಾಗಿ ನ್ಯಾಯವಾಗಿ ನಡೆದುಕೊಳ್ಳಬೇಕೋ ಅದಕ್ಕೆ ಅವಕಾಶ ಸಿಗುವುದಿಲ್ಲ. ನನಗೆ ಪರ್ಟಿಕ್ಯುಲರ್ ಇನ್‌ಸ್ಟೆನ್ಸಸ್ ಗೊತ್ತು. ಒಬ್ಬ ಜಾತಿಯವನನ್ನು ಆದೇ ಜಾತಿಯವನನ್ನು ಪರೀಕ್ಷೆಗೆ ಕೂಡಿಸಿ ನಾನು ಪಾಸ್ ಮಾಡುತ್ತೇನೆ ಎಂದು ಹೇಳಿ ಪಾಸ್ ಮಾಡುವ ಕಾಲ ಬಂದಿದೆ. ದಯವಿಟ್ಟು ಇದನ್ನು ಅವಾಯ್ಡ್ ಮಾಡಬೇಕು.

೪-೦೦ ಪಿ. ಎಂ.

ಮಾನ್ಯ ಅಧ್ಯಕ್ಷರೇ, ಈಗ ಈ ಬಿಲ್‌ನ್ನು ಏನು ತಂದಿದ್ದಾರೆ, ಇದನ್ನು ಇನ್ನೂ ಕಾಂಪ್ರ ಹೆನ್ಸೀವ್ ಆಗಿ ತರಬೇಕು. ಇದರಲ್ಲಿ ವಿದ್ಯಾರ್ಥಿಗಳ ಪಾತ್ರ ಬಹು ಮುಖ್ಯವೆಂದು ಹೇಳುತ್ತೇನೆ ವಿದ್ಯಾರ್ಥಿಗಳ ಸಹಕಾರ ಇಲ್ಲದೆ ಯೂನಿವರ್ಸಿಟಿಗಳನ್ನು ಯಾವ ರೀತಿ ನಡೆಸುತ್ತಾರೆ ಎಂದು ನನಗೆ ಗೊತ್ತಿಲ್ಲ. ಇದರಲ್ಲಿ ವಿದ್ಯಾರ್ಥಿಗಳ ಪಾತ್ರ ಇರಬೇಕು. ಇದರ ಬಗ್ಗೆ ಯೋಚನೆ ಮಾಡಿ ಇನ್ನೂ ಒಂದು ಕಾಂಪ್ರೆಹೆನ್ಸೀವ್ ಬಿಲ್ ಅನ್ನು ತಂದು ವಿದ್ಯಾರ್ಥಿಗಳಿಗೆ ಆಕ್ಟೀವ್ ಆಗಿ ವಿದ್ಯಾಭ್ಯಾಸ ಮುಂದುವರೆಸುವುದು ಒಂದೇ ಅಲ್ಲ, ಯೂನಿವರ್ಸಿಟಿ ಅಡ್ಮಿನಿಸ್ಟ್ರೇಷನ್‌ನಲ್ಲಿ ಅವರನ್ನು ಇನ್‌ವಾಲ್ವ್ ಮಾಡಿಸಬೇಕು. ಅವರನ್ನು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ ಎನ್ನುವ ಒಂದು ಭಯ ನಿಮಗೆ ಇದೆ. ಈಗಲೇ ನಮಗೆ ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಎಂಬ ಭಯ ಇದೆ, ಅದು ಹೋಗಬೇಕು. ವಿದ್ಯಾರ್ಥಿಗಳನ್ನು ಇನ್‌ವಾಲ್ವ್ ಮಾಡಿಸಿ ಇನ್‌ಡಿಸಿಪ್ಲಿನ್ ಅನ್ನು ಎನ್‌ಕರೇಜ್ ಮಾಡಿ ಎಂದು ನಾನು ಹೇಳುತ್ತಿಲ್ಲ. ಇನ್ನು ಮುಂದೆ ಅಂಥ ಭಯ ಇಲ್ಲ. ಅಂಥಹುದು ಏನೂ ಆಗುವುದಿಲ್ಲ. ಯಾರು ಕೆಟ್ಟವರು ಇದ್ದಾರೆ ನಿಜವಾಗಿ ಅವರನ್ನು ಎಕ್ಸ್‌ಟರ್ನ್ ಮಾಡಿ. ಈ ಡೀನ್ ಎಂದು ಏನು ಹೇಳಂಶ್ತೀರಿ, ಅವರನ್ನು ಸೆಲೆಕ್ಟ್ ಮಾಡುವಾಗ ಸೀನಿಯರ್ ಮೋಸ್ಟ್ ಎಂದು ಮಾಡಿದ್ದೀರಿ. ನಾನು ಹೇಳುವುದು ರೀಡರ್ ಕ್ಯಾಡರ್ ಏನು ಇದ್ದಾರೆ, it cannot be only by Seniority, it should be on selection basis. ಅಂಥಾದ್ದನ್ನು ಮಾಡಿ. ಆರ್ಬಿಟ್ರರಿಯಾಗಿ ಮಾಡುವುದು ಬೇಡವೆಂದು ಹೇಳುತ್ತೇನೆ, ನನಗೆ ಇದರ ಬಗ್ಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ —ಮಾನ್ಯ ಅಧ್ಯಕ್ಷರೇ ಇದಕ್ಕೆ ಮಾನ್ಯ ಮಂತ್ರಿಗಳು ಅಮೆಂಡ್‌ಮೆಂಟ್ ಅನ್ನು ಕೊಟ್ಟಿದ್ದಾರೆ ಮಾನ್ಯ ಮಂತ್ರಿಗಳು ಪೂರ್ವ ಪೀಠಿಕೆ ಹೇಳುವಾಗ ನಾನು ಇರಲಿಲ್ಲ. ಆದರೆ ಒಂದು ಸಂಶಯ ಇಲ್ಲಿ ಉಬ್ಬವಿಸುತ್ತದೆ. ಈ ಒಂದು ಕಿದ್ದುಪಡಿ ಅವಶ್ಯಕತೆಯೋ ಎನ್ನುತಕ್ಕ ಪ್ರಶ್ನೆ. ನನ್ನ ದೃಷ್ಟಿಯಲ್ಲಿ ಇದು ಅವಶ್ಯ ಅಲ್ಲ ಎಂದು ಹೇಳುತ್ತೇನೆ.

ಛೇರ್ಮನ್,—ಮಾನ್ಯ ತಿಮ್ಮೇಗೌಡರು ಒಂದು ಅಮೆಂಡ್‌ಮೆಂಟ್ ಅನ್ನು ಖಂಡ ೨ಕ್ಕೆ ಕೊಟ್ಟಿದ್ದಾರೆ. ಅದರ ನಂತರ ತಮ್ಮ ಅಮೆಂಡ್‌ಮೆಂಟನ್ನು ತೆಗೆದುಕೊಳ್ಳುತ್ತೇನೆ.

ಖಂಡ-೨ :

† ಶ್ರೀ ಜೆ. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ. ೧೯೮೬ರ ಕರ್ನಾಟಕ ವಿಶ್ವವಿದ್ಯಾನಿಲಯಗಳ ತಿದ್ದುಪಡಿ ವಿಧೇಯಕಕ್ಕೆ ನನ್ನ ತಿದ್ದುಪಡಿಯನ್ನು ಮಂಡಿಸುತ್ತೇನೆ. ಸೆಕ್ಷನ್ ೧೭(೧) ಪ್ರಾವಿಷನ್‌ನಲ್ಲಿ "Provided that if in any Faculty there is no Professor, the Senior-most Reader shall act as the Dean and if there is no Reader, such teacher as the Vice-Chancellor may designate

shall act as the Dean" ಎಂದು ಇದೆ. ಈ ವಿಚಾರದಲ್ಲಿ ಶ್ರೀಮಾನ್ ಭೂಪತಿಯವರು ಮತ್ತು ಇತರೆ ಸ್ನೇಹಿತರು ಕೂಡ ಹೇಳಿದ್ದಾರೆ. ರೀಡರ್ಸ್ ಎನ್ನುವುದರಲ್ಲಿ ಸೀನಿಯರ್ ಮೋಸ್ಟ್ ರೀಡರ್ಸ್ ಎಂದು ಹೇಳಿದ ಮೇಲೆ ಟೀಚರ್ಸ್ ಅನ್ನು ಏಕೆ ವೈಸ್ ಛಾನ್ಸಲರ್ ಅವರ ಅಧಿಕಾರಕ್ಕೆ ಬಿಡುತ್ತೀರಿ ಅದನ್ನು ಕೂಡ ಸೀನಿಯರ್ ಮೋಸ್ಟ್ ಟೀಚರ್ ಎಂದು ಮಾಡಬೇಕು. ಹೇಳಿದ್ದಾರೆ ಅದೇ ಅಮೆಂಡ್‌ಮೆಂಟ್ ಅನ್ನು ನಾನು ಪಂಡನೆ ಮಾಡಿರತಕ್ಕದ್ದು. ಇದರಲ್ಲಿ ಒಂದು ಡಿಫಿಕಲ್ಟಿಯನ್ನು ಡಿಪಾರ್ಟ್‌ಮೆಂಟ್‌ನವರು ಹೇಳುತ್ತಾರೆ. ಒಂದೊಂದು ಡಿಪಾರ್ಟ್‌ಮೆಂಟ್ ಹಲವಾರು ಫ್ಯಾಕಲ್ಟಿನಲ್ಲಿ ಡಿಪಾರ್ಟ್‌ಮೆಂಟ್ಸ್ ಇರುತ್ತವೆ. ಯಾವುದನ್ನು ಸೀನಿಯರ್ ಟೀಚರ್ ಎಂದು ಮಾಡುವುದು ಎಂದು ಹೇಳುತ್ತಾರೆ. ರೀಡರ್ಸ್‌ದ್ದು ಸಹ ಅದೇ ಪ್ರಶ್ನೆ ಬರುತ್ತದೆ. ಒಂದೊಂದು ಡಿಪಾರ್ಟ್‌ಮೆಂಟ್‌ಗೆ ಒಬ್ಬ ರೀಡರ್ ಇರುತ್ತಾರೆ. ಪ್ರತಿ ಡಿಪಾರ್ಟ್‌ಮೆಂಟ್‌ನಲ್ಲಿ ಸೀನಿಯಾರಿಟಿ ಎಂದು ಮಾಡುತ್ತಾರೆ. ಇದನ್ನು ಮಾಡಬೇಕಾದರೆ ರೀಡರ್ಸ್ ಪೈಕಿ ಸೀನಿಯಾರಿಟಿಯನ್ನು ಯಾವ ರೀತಿ ಅವರು ಈಗ ಮಾಡಿಕೊಂಡು ಹೋಗುತ್ತಿದ್ದಾರೆ. ಅದೇ ರೀತಿ ಟೀಚರ್ ಸೀನಿಯರ್ ಅನ್ನು ಮಾಡಿಕೊಂಡು ಹೋಗಬೇಕೆಂದು ಒಬೊಬ್ಬರಿಗೆ ಎರಡೆರಡು ವರ್ಷ ಎಂದು ಮಾಡಿಕೊಂಡು ಹೋಗಬಹುದು. ಅದನ್ನು ಬಿಟ್ಟು ವೈಸ್ ಛಾನ್ಸಲರ್‌ಗೆ ಅಧಿಕಾರ ಕೊಟ್ಟರೆ ಹೇಗೆ ? ನಾನು ಕೂಡ ೮-೧೦ ವರ್ಷ ಸಿಂಡಿಕೇಟ್ ಮೆಂಬರ್ ಆಗಿ ಸೆನೆಟ್ ಮೆಂಬರ್ ಆಗಿ ಕೆಲಸ ಮಾಡಿದ್ದೇನೆ. ವೈಸ್ ಛಾನ್ಸಲರ್‌ಗೆ ಅಧಿಕಾರ ಕೊಟ್ಟರೆ ಅಲ್ಲಿರತಕ್ಕ ಉಪಾಧ್ಯಾಯರ ಒತ್ತಡಕ್ಕೆ ಒಳಗಾಗಿ ಅವರವರಲ್ಲಿ ಭಿನ್ನಾಭಿಪ್ರಾಯ ಬರಲು ಅವಕಾಶವಾಗುತ್ತದೆ. ಅದು ಇಲ್ಲದೆ ಇದ್ದಾಗ ಈ ರೂಲ್ ಪ್ರಕಾರ ಮಾಡಿಕೊಂಡು ಹೋಗುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ಯಾವ ಭಿನ್ನಾಭಿಪ್ರಾಯಕ್ಕೂ, ವೈಶಮ್ಯಕ್ಕೂ ಕೂಡ ಅವಕಾಶವಾಗುವುದಿಲ್ಲ. ಆದ್ದರಿಂದ in the lines 3 and 4 of the Provision to section 17, for the words "Such teacher as the Vice-Chancellor may designate" ಎಂಬುದರ ಬದಲಾಗಿ "the senior-most teacher in that Department" shall be substituted" ಎಂದು ತಿದ್ದುಪಡಿ ಮಾಡಬೇಕು.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇದರ ಅವಶ್ಯಕತೆ ಇಲ್ಲ ಎಂದು ನನ್ನ ಕೆಲವು ಸ್ನೇಹಿತರು ಹೇಳಿದ್ದಾರೆ. ಈಗ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾಮರ್ಸ್ ಮತ್ತು ಕಮ್ಯುನಿಕೇಷನ್ ಡಿಪಾರ್ಟ್‌ಮೆಂಟ್‌ಗಳು ಒಟ್ಟಿಗೆ ಇವೆ. ಇದನ್ನು ಬೈಫರ್‌ಕೇಟ್ ಮಾಡಬೇಕಾಗಿದೆ, ಇವುಗಳನ್ನು ಬೈಫರ್‌ಕೇಟ್ ಮಾಡುವ ಕಾಲದಲ್ಲಿ ಕಾಮರ್ಸ್‌ನಲ್ಲಿ ಪ್ರೊಫೆಸರ್ ಇಲ್ಲದಿರಬಹುದು ಅಥವಾ ಕಮ್ಯುನಿಕೇಷನ್‌ನಲ್ಲಿ ಪ್ರೊಫೆಸರ್ ಇಲ್ಲದಿರಬಹುದು ಆಗ ಟೆಂಪರರಿಯಾಗಿ ಅಲ್ಲಿಗೆ ರೀಡರ್ ಅಥವಾ ಪ್ರೊಫೆಸರ್ ಅವರನ್ನು ನೇಮಕ ಮಾಡುವವರೆಗೆ ಈ ವಿಚಾರದಲ್ಲಿ ಡೀನ್ ಅವರು ಇರುವುದು ಅವಶ್ಯಕ. ಬೇರೆ ಡಿಪಾರ್ಟ್‌ಮೆಂಟ್‌ನ ಡೀನ್ ಆದರೂ ಇರಬೇಕಾಗುತ್ತದೆ. ಏಕೆಂದರೆ, ಕಾನ್‌ವೊಕೇಷನ್ ಸಮಯದಲ್ಲಿ ಡಿಗ್ರಿಯನ್ನು ಲೀಗಲ್ ಆಗಿ ಕನ್‌ಫರ್ಮ್ ಮಾಡಬೇಕಾದಾಗ ಮತ್ತು ಕೆಲವು ಸಬ್ಜೆಕ್ಟ್‌ನಲ್ಲಿ ಬದಲಾವಣೆ ಮಾಡಬೇಕೆಂದು ಬೇಡಿಕೆಗಳು ಬಂದಾಗ ಡೀನ್ ಅವರಿಂದ ರೆಕಮೆಂಡೇಷನ್ಸ್ ಬರಬೇಕಾಗುತ್ತದೆ. ಈ ರೀತಿಯಿಂದ ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಲು ಇವರು ಇರಬೇಕಾಗುತ್ತದೆ. ಪರರಾಷ್ಟ್ರಗಳಲ್ಲಿ ಡೀನ್ ಅವರು ಏನೇನು ಕೆಲಸಗಳನ್ನು ಮಾಡುತ್ತಾರೆ. ಅಂತಹ ಹೆಚ್ಚಿನ ಕೆಲಸಗಳನ್ನು ಮಾಡುವಂತಹ ಅಧಿಕಾರ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಕೆಲಸ ಮಾಡುತ್ತಿರುವ ಡೀನ್ ಅವರುಗಳಿಗೆ ಇಲ್ಲ ಇವರು ಏನಿದ್ದರೂ ಸಿಲಬಸ್ ಅನ್ನು ಬದಲಾವಣೆ ಮಾಡುವಂತಹ ಕಮಿಟಿಗಳ ಸಭೆ ಸೇರಿದಾಗ ಅಲ್ಲಿ ಇವರು ಪ್ರಿಸೈಡ್ ಮಾಡುತ್ತಾರೆ. ಈ ರೀತಿಯಿಂದ ಇವರು ಕೆಲವು ಕೆಲಸಗಳನ್ನು ಮಾಡುತ್ತಾರೆ. ಆದ್ದರಿಂದ ಒಬ್ಬರು ಡೀನ್ ಇರಬೇಕಾಗುತ್ತದೆ. ಈ ಒಂದು ಕೆಲಸ ಮಾಡಲು ಸೀನಿಯರ್ ಮೋಸ್ಟ್ ಪ್ರೊಫೆಸರ್ ಇಲ್ಲವೇ ಸೀನಿಯರ್ ಮೋಸ್ಟ್ ರೀಡರ್ ಅಥವಾ ಸೀನಿಯರ್ ಮೋಸ್ಟ್ ಟೀಚರ್ ಒಬ್ಬರನ್ನು ನೇಮಕ ಮಾಡುವುದು ಒಳ್ಳೆಯದು. ಈ ಬಗ್ಗೆ ನಾನು ಈಗ ತಂದಿರುವ ತಿದ್ದುಪಡಿಯನ್ನು ತಾವು ಒಪ್ಪಿಕೊಳ್ಳಲೇಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಅವಶ್ಯಕತೆ ಇಲ್ಲ ಎಂದು ಕೆಲವರು ಹೇಳಿದ್ದರಲ್ಲಿ ಅರ್ಥವಿಲ್ಲ. ಇದರ ಅವಶ್ಯಕತೆ ಇದೆ. ಹೊಸ ವಿಶ್ವವಿದ್ಯಾನಿಲಯಗಳು ಸ್ಥಾಪನೆ ಆಗುವಾಗ ಈ ಸಬ್ಜೆಕ್ಟ್‌ನ್ನು ಬೈಫರ್‌ಕೇಟ್

ಮಾಡಲು ಒಂದೆರಡು ವರ್ಷಗಳವರೆಗೆ ಇದರ ಅವಶ್ಯಕತೆ ಇರುತ್ತದೆ. ಅದಕ್ಕೋಸ್ಕರ ಈ ತಿದ್ದುಪಡಿಯನ್ನು ತಂದಿದ್ದಾರೆಂದು ನಾನೂ ಭಾವಿಸಿಕೊಂಡಿದ್ದೇನೆ.

ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದಂತೆ ಹಿಂದೆ ಇದ್ದಿದ್ದನ್ನು ಕೈಬಿಟ್ಟು ಈಗ ಪುನ: ತಿದ್ದುಪಡಿ ತಂದಿದ್ದಾರೆ. ಈ ರೀತಿ ತಿದ್ದುಪಡಿ ಮಾಡಬೇಕೆಂದು ಹಲವಾರು ವಿಶ್ವವಿದ್ಯಾನಿಲಯಗಳಿಂದ ಬೇಡಿಕೆಗಳು ಬಂದಿವೆ. ಇದರ ಒಂದು ಅವಶ್ಯಕತೆ ಇದೆ ಎಂದು ನೀವು ತಿದ್ದುಪಡಿ ಮಾಡುತ್ತಿರುವಾಗ. ಉಪಾಧ್ಯಾಯರುಗಳಲ್ಲಿಯೇ ಯಾರು ಈ ಕೆಲಸ ಮಾಡಬೇಕು ಎಂಬ ಬಗ್ಗೆ ಭಿನ್ನಾಭಿಪ್ರಾಯ ಬರಬಹುದು ಆದ್ದರಿಂದ ಯಾರಿಲ್ಲಿಯೂ ಭಿನ್ನಾಭಿಪ್ರಾಯ ಬರದ ರೀತಿಯಲ್ಲಿ ಸೀನಿಯರ್-ಮೋಸ್ಟ್ ಟೀಚರ್ ಎಂದು ತಿದ್ದುಪಡಿ ಮಾಡುವುದು ಒಳ್ಳೆಯದು. ಇದನ್ನು ತಾವು ಒಪ್ಪಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ನೀವೂ ಸಹ ಇದರ ಮೇಲೆ ಮಾತನಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾನು ಮಾತನಾಡುವುದಿಲ್ಲ. ಆದರೆ ನನ್ನ ಒಂದು ಸಲಹೆ ಇದೆ. ಕಳೆದ ಸಲವೇ ನಾನು ಈ ಬಗ್ಗೆ ಸಲಹೆ ಮಾಡಿದ್ದೆ. ಆದರೆ ತಾವು ಒಪ್ಪಿಕೊಳ್ಳಲಿಲ್ಲ. ಈಗಲಾದರೂ ಕೂಡ ಮಾನ್ಯ ತಿಮ್ಮೇಗೌಡರು ತಂದಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದು ಒಳ್ಳೆಯದು. ಸೀನಿಯರ್ ಮೋಸ್ಟ್ ಟೀಚರ್ ಎಂದು ಇದರಲ್ಲಿ ಸೇರಿಸಬೇಕು ಇಲ್ಲದಿದ್ದರೆ ಈ ಜಾಗಕ್ಕೆ ಬೇರೆ ಯಾರಾದರೂ ಬರಬಹುದೆಂದು ಅವರು ಹೇಳಿದರು. ಈ ಬಗ್ಗೆ ನನ್ನ ವಾದ ಏನೆಂದರೆ, ಈಗಿನ ಆಕ್ಟ್‌ನಲ್ಲಿರುವಂತಹ ಡೆಫಿನಿಷನ್‌ನಲ್ಲಿ ಏನು ಹೇಳಿದ್ದಾರೆಂದರೆ, "As per the definition in the Karnataka State Universities Act, Teachers includes Professors, Readers, Lecturers and other persons imparting instructions in any affiliated college or any demonstrator." ಎಂದು ಈ ರೀತಿ ಹೇಳಿರುವುದರಿಂದ ಇದಕ್ಕೆ ಯಾರು ಬೇಕಾದರೂ ಬರಬಹುದು ಎಂದು ಅರ್ಥ ಬರುತ್ತದೆ. ಇದರಿಂದ ವಂಂದೆ ಅನಾಹುತ ಆಗಬಹುದು, ಆದ್ದರಿಂದ ಟೀಚಿಗ್ ಅನ್ನುವುದು ಬೇಡ ಎಂದು ನಾವು ಹಿಂದೆ ಇಲ್ಲಿ ವಾದ ಮಾಡಿದ್ದೆವು. ಈಗ ಮಾನ್ಯ ತಿಮ್ಮೇಗೌಡರು ತಂದಿರುವ ತಿದ್ದುಪಡಿಯನ್ನಾದರೂ ಒಪ್ಪಿಕೊಳ್ಳಿ ಸೀನಿಯರ್ ಮೋಸ್ಟ್ ಟೀಚರ್ ಎಂದಾದರೂ ಇರಲಿ. ಇಲ್ಲದಿದ್ದರೆ ಇದು ದುರುಪಯೋಗವಾಗಬಹುದು. ಡೆಫಿನಿಷನ್‌ನಲ್ಲಿ imparting instructions in any affiliated college ಎಂದು ಇದೆ. ಇದರ ಪ್ರಕಾರ ಲೆಕ್ಚರರ್ಸ್ ಕ್ಯಾಟಿಗರಿಯಲ್ಲಿ ಇಲ್ಲವೇ ಟೀಚರ್ಸ್ ಕ್ಯಾಟಿಗರಿಯಲ್ಲಿ ತಮಗೆ ಬೇಕಾದವರನ್ನು ಈ ಜಾಗಕ್ಕೆ ನೇಮಕ ಮಾಡಿದರೆ, ಅದರ ಫನತೆ ಮತ್ತು ಗೌರವ ಕಡಿಮೆ ಆಗುತ್ತದೆ, ಆದ್ದರಿಂದ ಕೊನೆಯ ಪಕ್ಷ ಈ ತಿದ್ದುಪಡಿಯನ್ನಾದರೂ ಒಪ್ಪಿಕೊಳ್ಳಿ.

ಶ್ರೀ ಎಂ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ವಿಚಾರ ಮಾಡಬೇಕೆಂದು ನನ್ನ ಇಲಾಖೆಯವರನ್ನು ಕಳುಹಿಸಿಕೊಟ್ಟಿದ್ದೇನೆ. ಪಾಕಲ್ಟಿ ಅಂದಾಗ ಅದರಲ್ಲಿ ಅನೇಕ ಡಿಪಾರ್ಟ್‌ಮೆಂಟ್‌ಗಳು ಇರುತ್ತವೆ. ಸೀನಿಯರ್ ಟೀಚರ್ಸ್ ಅಥವಾ ಲೆಕ್ಚರರ್ಸ್ ಎಂದಾಗ in any department ಎಂದು ಆಗುತ್ತದೆ. ಫ್ಯಾಕಲ್ಟಿಯಲ್ಲಿ ನಾನಾ ಡಿಪಾರ್ಟ್‌ಮೆಂಟ್‌ಗಳು ಇದ್ದಾಗ ಸೀನಿಯರ್ ಟೀಚರ್ಸ್ ಎಂದಾಗ ಆ ಸೀನಿಯರ್ ಟೀಚರ್ in any of the department ಎಂದು ಆಗಬಹುದು. ಅಲ್ಲೂ ವೇಗ್ ಆಗುತ್ತದೆ. ಅರ್ಧ ಡಜನ್ ಡಿಪಾರ್ಟ್‌ಮೆಂಟ್ಸ್ ಇದ್ದಾಗ there will be six senior members in their own respective departments.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸೀನಿಯಾರಿಟಿ ಹೇಗೆ ಕೌಂಟ್ ಮಾಡುತ್ತೀರಿ, ಡೇಟ್ ತೆಗೆದುಕೊಳ್ಳುತ್ತೀರಾ, ಇಲ್ಲವೇ ಆಟ್ ದಿ ಮೋಸ್ಟ್ ಟೈಮಿಂಗ್ಸ್ ನೋಡುತ್ತೀರಾ, ವಯಸ್ಸು ಆದರೂ ನೋಡುತ್ತಾರೆ, ಅದಕ್ಕೆ ಸೀನಿಯಾರಿಟಿ ಹೇಗೆ ಕೌಂಟ್ ಮಾಡಬೇಕು ಎಂದು ಸರ್ಟನ್ ಕ್ರೈಟೀರಿಯ ಇದೆ ಅದರ ಪ್ರಕಾರ ಹೋಗಿ ಇಲ್ಲದೇ ಹೋದರೆ ಅನಾಹುತವಾಗುತ್ತದೆ. ಯಾವರೀತಿ ಸೀನಿಯಾರಿಟಿ ಕೌಂಟ್ ಮಾಡಬೇಕು. ಬೇಕಾದರೆ ಟೀಚರ್ ಡೆಫಿನಿಷನ್ ತೆಗೆದು ನೋಡಿ, ನೀವು ಕೊಟ್ಟಂಥ ಆಕ್ಟ್‌ನಲ್ಲೇ ಇದೆ.

ಶ್ರೀ ಎಂ. ಚಂದ್ರಶೇಖರ್.—ಅದಕ್ಕೆ ಮಾನ್ಯ ಮೊಯ್ಲಿಯವರಿಗೆ ನೀವೇ ಉತ್ತರ ಹೇಳಿದ್ದೀರಿ. ಅದು ಸೆಕ್ಷನ್‌ನಲ್ಲಿದೆ, ಅದಕ್ಕೆ ಉತ್ತರ ನೀವು ಹೇಳಿದ್ದೀರಿ. ಇದರಲ್ಲಿ ಈ ಒಂದು ಡಿಪಿಕಲ್ಪಿ ಬರುತ್ತಾ ಇದೆ. ಆದುದರಿಂದ ೭೭ರಲ್ಲಿ.....

ಶ್ರೀ ಹೆಚ್. ಎಲ್. ತಿಮ್ಮೇಗೌಡ.—೬ ಜನರಲ್ಲಿ ಯಾರು ಸೀನಿಯರ್ ಇರುತ್ತಾರೋ ಅವರು ಆಗಲಿ.

SRI M. CHANDRASHEKHAR.—Seniormost teacher in any of the faculties.

SRI M MALLIKARJUNA KHAGRE.—It is better to clarify. ಇಲ್ಲದೇ ಹೋದರೆ ಏನಾಗುತ್ತದೆಯೆಂದರೆ, ಯಾರನ್ನಾದರೂ ಲೆಕ್ಚರರನ್ನು ಮಾಡಿಬಿಟ್ಟರೆ ಆಗ ಹಾರ್ಟ್ ಬರ್ನಿಂಗ್ ಆಗಿ ಅದಕ್ಕೆ ಸ್ಟೈಕ್ ಆಗಿ, ಗಲಾಟೆಯಾಗಿ ಪ್ರಾಬ್ಲಂ ಕ್ರಿಯೇಟ್ ಆಗುತ್ತದೆ.

ಶ್ರೀ ಯು. ಭೂಪತಿ.—ಈ ಬಿಲ್ಲಿನಲ್ಲಿ ಕೆಲವು ವಿಚಾರಗಳನ್ನು ಬಿಟ್ಟರೆ ಉಳಿದಂಥ ವಿಷಯಗಳ ಬಗ್ಗೆ ನಾವು ಹೀಗೆ ಇರಬೇಕು ಎಂದು ತಿಳಿದುಕೊಂಡಿದ್ದೆವು. ಆದರೆ ಈ ಬಿಲ್ ಬಗ್ಗೆ ಮಿನಿಸ್ಟರೇ ಕನ್ವಿನ್ಸ್ ಆಗಿಲ್ಲ. ಇಲ್ಲಿ ಅಸೆಂಬ್ಲಿಯಲ್ಲಿ ಪಾಸ್‌ಮಾಡಿಕೊಡಿ ಎಂದು ಬರುತ್ತಾ ಇದ್ದಾರೆ. ಅವರೇ ಕನ್ವಿನ್ಸ್ ಆಗಿಲ್ಲ. ಅದಕ್ಕೊಸ್ಕರ ಇದನ್ನು ಇನ್ನು ಸ್ವಲ್ಪ ಮುಂದಕ್ಕೆ ಹಾಕಿ, ಅವರು ಕನ್ವಿನ್ಸ್ ಆದಮೇಲೆ, ಅನಂತರ ಪಾಸ್ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ, ಇದನ್ನು ನಾಳೆ ತೆಗೆದುಕೊಂಡು ಬಿಡಿ.

ಅಧ್ಯಕ್ಷರು.—ನೀವು ಹೇಳಿದಿರಲ್ಲ, ಅದಕ್ಕೆ ಎಸ್ ಅಂದರೆ ಮುಗಿದು ಹೋಯಿತಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ನೋಡಿ, ನಾವು ಇಂತಹ ಒಳ್ಳೆಯ ಸಲಹೆ ಕೊಟ್ಟರೂ ಕೇಳುವುದಿಲ್ಲ.

ಅಧ್ಯಕ್ಷರು.—ನೀವು ಬಹಳ ಸಲ ಒಳ್ಳೊಳ್ಳೆಯ ಸಲಹೆಗಳನ್ನು ಕೊಡುತ್ತೀರಿ, ಒಮ್ಮೊಲೇ ಹಾರುತ್ತೀರಿ ಅಷ್ಟೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ನಾಳೆ ತೆಗೆದುಕೊಳ್ಳಿ.

ಅಧ್ಯಕ್ಷರು.—ನಾನು ಓಟಿಗೆ ಹಾಕುತ್ತೇನೆ.

ಶ್ರೀ ಯು. ಭೂಪತಿ.—ಈಗ ಸದ್ಯಕ್ಕೆ ವಿತ್‌ಡ್ರಾ ಮಾಡಿಕೊಳ್ಳಲಿ, ಆಮೇಲೆ ತರಲಿ.

ಅಧ್ಯಕ್ಷರು.—ಈಗ ಮಂತ್ರಿಗಳು ಏನು ಹೇಳುತ್ತಾರೋ ನೋಡೋಣ.

ಶ್ರೀ ಯು. ಭೂಪತಿ.—ಈಗ ಸುಮ್ಮನೆ ಬಿಲ್ ಪಾಸ್ ಮಾಡಿ ಮುಂದೆ ಫಜೀತಿ ಬೀಳುವುದು ಬೇಡ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ಇದು ಆದಮೇಲೆ ನಿಮ್ಮ ತಿದ್ದುಪಡಿ ಬರುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಇದನ್ನು ಒಪ್ಪಿದರೆ ಎಲ್ಲದಕ್ಕೂ ಸಮಾಜಾಯಿಷಿ ಸಿಗುತ್ತದೆ. ಮಾನ್ಯ ಮಂತ್ರಿಗಳೇ ಈ ಕಡೆ ಗಮನಕೊಡಿ. ಈಗ ನಾನು ಒಂದು ಅಮೆಂಡ್‌ಮೆಂಟ್ ಮೂವ್ ಮಾಡಿದ್ದೇನೆ. ಇದರ ತಿರ್ಪ್ಪ ಏನೆಂದರೆ, ಎರಡನೇ ಪ್ರೊವಿಸೊ ಇದಯೆಲ್ಲಾ, ಅದನ್ನು ಸದ್ಯಕ್ಕೆ ಡಿಲೀಟ್ ಮಾಡಿ ಎಂದು. ತಾವು ಅದನ್ನು ಒಪ್ಪಿದರೆ ಈ ಎಲ್ಲಾ ಸಮಸ್ಯೆಗಳೂ ಬಗೆಹರಿಯುತ್ತವೆ. ಇಲ್ಲ ಅಂದರೆ ನಾಳೆ ಡಿಸ್ಕಸ್‌ಗೆ ತೆಗೆದುಕೊಳ್ಳಬೇಕು. ಅದಕ್ಕೊಸ್ಕರ ಮುಂದೆ ಹಾಕಿಬಿಡಿ. ಯೂನಿವರ್ಸಿಟಿ ವಿಚಾರದಲ್ಲಿ ಇಂತಹ ತಿದ್ದುಪಡಿ ತರುವಾಗ ಬಹಳ ಪಂಂಜಾಗ್ರತೆಯನ್ನು ನಾವು ತೆಗೆದುಕೊಳ್ಳಬೇಕು ಮತ್ತು ಮುಂದಾಲೋಚನೆ ಕೂಡ ಮಾಡಬೇಕಾಗುತ್ತದೆ ಹಾಗೂ ಇತರೆ ಆಗುಹೋಗುಗಳ ಬಗ್ಗೆಯೂ ನಾವು ವಿಚಾರ ಮಾಡಬೇಕಾಗುತ್ತದೆ. ಈಗ ಲಾ ಡಿಪಾರ್ಟ್‌ಮೆಂಟ್‌ನವರು ಇದ್ದಾರಲ್ಲ ಅವರು ಏನೋ ಐಡಿಯ ಹೇಳಿರುತ್ತಾರೆ, ಅದನ್ನು ತೆಗೆದುಕೊಂಡು ಬರುತ್ತಾರೆ, ನಮ್ಮಿದೂ ಅನುಭವ ಉಂಟು. ಅವರದೂ ಅನುಭವ ಉಂಟು. ಈಗ ಲಾ ಡಿಪಾರ್ಟ್‌ಮೆಂಟ್ ತಂದಿರುವುದನ್ನು ಸ್ವಲ್ಪ ಸೂಕ್ಷ್ಮವಾಗಿ

ವಿಚಾರ ಮಾಡಿದರೆ, ಇದು ಸರಿಯಿಲ್ಲ, ಡ್ರಾಫ್ಟಿಂಗೂ ಸರಿಯಿಲ್ಲ, ವಿಷಯಗಳೂ ಸರಿಯಿಲ್ಲ, ಯಾರು ಹೇಳಿದರೋ ನಮಗೆ ಗೊತ್ತಿಲ್ಲ. ಆದುದರಿಂದ ಇದನ್ನು ನಾಳೆಗೆ ಹಾಕಿದರೆ ಕೂಲಂಕಷವಾಗಿ ವಿಚಾರ ಮಾಡಿಬಿಟ್ಟು ಪಾಸ್ ಮಾಡೋಣ ಎಂದು ಹೇಳುತ್ತಾ ಇದ್ದೇನೆ, ಯೋಚನೆ ಮಾಡಿ ಹೇಳಿ.

ಶ್ರೀ ಎಂ. ಚಂದ್ರಶೇಕರ್.—ಡಿಸ್ಕಷನ್‌ಗೆ ಬೇಕಾದರೆ ನಾಳೆಗೆ ಹಾಕಿ.

ಅಧ್ಯಕ್ಷರು.—ಓಟಿಗೆ ಹಾಕಲೇ.

ಶ್ರೀ ಯು. ಭೂಪತಿ.—ಅವರು ನಾಳೆಗೆ ಹಾಕಿ ಅಂದರೆ ನೀವು ಓಟಿಗೆ ಹಾಕುತ್ತೇನೆ ಎಂದು ಹೇಳಿದಿರಲ್ಲ, ನಮ್ಮ ಪರಿಸ್ಥಿತಿ ಏನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಡಿಸ್ಕಷನ್ ನಾಳೆ. ಏಕೆಂದರೆ ಅವರದು ಸ್ವಲ್ಪ ಅಫಿಷಿಯಲ್ ಅಮೆಂಡ್‌ಮೆಂಟ್ ಇದ್ದಹಾಗೆ ಇದೆ. ಆದ್ದರಿಂದ ಇದನ್ನು ನಾಳೆಗೆ ತೆಗೆದುಕೊಂಡು ಬಿಡಿ.

ಅಧ್ಯಕ್ಷರು.—ಆಯಿತು, ನಾಳೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಮ್ಮ ಮಾತು ಕೇಳಲಿಲ್ಲ ಅಂದರೆ ಅವರ ಮಾತನ್ನಾದರೂ ಕೇಳಿ.

ಅಧ್ಯಕ್ಷರು.—ನಿಮ್ಮ ಮಾತು ಕೇಳುತ್ತೇನೆ, ಅವರ ಮಾತೂ ಕೂಡ ಕೇಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮದು ಅರ್ಧ ಗಂಟೆ ಚರ್ಚೆ ಇದೆ. ೪ ಸಲ ಬಂದು ಹೋಯಿತು. ಅದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು.—ಇನ್ನೊಂದು ಬಿಲ್ ಇದೆ. ಕರ್ನಾಟಕ ತೆರಿಗೆ ಶಾಸನಗಳ (ತಿದ್ದುಪಡಿ) ವಿಧೇಯಕ ಇದೆ. ಪ್ರಕಾಶ್‌ರವರೇ, ಇದನ್ನು ಮುಂದನೆ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್.—ನಿಯಮ ೬೮ರ ಕೆಳಗೆ ಫ್ಲಡ್ ಸಿಚುಯೇಷನ್ ಬಗ್ಗೆ ಡಿಸ್ಕಷನ್ ಇದೆ, ಅದು ಆಗಬೇಕಲ್ಲ. ಈಗ ೪-೧೫ ಗಂಟೆಯಾಯಿತು. ತಾವು ಟೈಂ ಫಿಕ್ಸ್ ಮಾಡಿದ್ದೀರಿ.

ಅಧ್ಯಕ್ಷರು.—೧೦ ನಿಮಿಷದಲ್ಲಿ ಈ ಬಿಲ್ ಮುಗಿಯುತ್ತದೆ.

THE KARNATAKA TAXATION LAWS (AMENDMENT) BILL, 1988

Motion to Consider

SRI M.P. PRAKASH (Minister for Information, and Tourism).—Mr. Speaker, Sir, I beg to move that ;

"The Karnataka Taxation Laws (Amendment) Bill, 1988 be taken into consideration."

The question was proposed

SRI M.P. PRAKASH.—Sir, in the Karnataka Sales Tax Act, 1957 Section 5 is proposed to be amended to the extent that the time limit which is now granted till 31st May 1988 to dispose off the old stock of Indian Made foreign liquor which has already been suffered tax at the Rate prevailing prior to 1st April 1988, is to be extended upto 31st July 1988.

With regard to Section 6, the Supreme Court has held that taxable goods purchased and consumed for ancillary purposes like